
# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಬುಧವಾರ, ಜನವರಿ 22, 2025

ಸಂಪುಟ : 51 ಸಂಚಿಕೆ : 250 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

# ಸಿದ್ಧಗಂಗಾ ಶ್ರೀ ರಾಷ್ಟ್ರ ಸಂತ ಎಂದು ಘೋಷಿಸಿ

## ಆರನೇ ವರ್ಷದ ಪುಣ್ಯ ಸ್ಮರಣೋತ್ಸವದಲ್ಲಿ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ

ದಾವಣಗೆರೆ, ಜ.21- ತ್ರಿವಿಧ ದಾಸೋಹಿ ಸಿದ್ಧಗಂಗಾ ಡಾ. ಶಿವಕುಮಾರ ಮಹಾಸ್ವಾಮೀಜಿಯವರನ್ನು 'ರಾಷ್ಟ್ರ ಸಂತ' ಎಂದು ಪರಿಗಣಿಸಿ, ಘೋಷಿಸಬೇಕೆಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಜಗದ್ಗುರು ಮಹಾಪೀಠದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ನಗರದ ಕೊಂಡಜ್ಜಿ ರಸ್ತೆಯಲ್ಲಿನ ಆರ್‌ಟಿಓ ಕಚೇರಿ ಬಳಿ ಸಿದ್ಧಗಂಗಾ ಡಾ. ಶಿವಕುಮಾರ ಮಹಾಸ್ವಾಮೀಜಿ ವೃತ್ತದಲ್ಲಿ ಶ್ರೀಗಳ ಪುತ್ಥಳಿ ಅನಾವರಣಗೊಳಿಸಿ, ನಂತರ ನಡೆದ ಶ್ರೀಗಳ ಆರನೇ ವರ್ಷದ ಪುಣ್ಯ ಸ್ಮರಣೋತ್ಸವ ಹಾಗೂ ದಾಸೋಹ ದಿನಾಚರಣೆ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಡಾ. ಶಿವಕುಮಾರ ಮಹಾಸ್ವಾಮೀಜಿಯವರು 20ನೇ ಶತಮಾನದ ಮಾತನಾಡುವ ದೇವರು, ನಡೆದಾಡುವ ವಿಶ್ವವಿದ್ಯಾಲಯ. ಇನ್ನೂ ಸಾವಿರ ಜನುಮ ಹೊತ್ತು ಬಂದರೂ ಶ್ರೀಗಳ ಋಣ ತೀರಿಸಲು ಸಾಧ್ಯವಿಲ್ಲ. ಶ್ರೀಮಠವನ್ನು ಜಾತ್ಯತೀತವಾಗಿ ನಡೆಸುವ ಮೂಲಕ ಕೋಟ್ಯಂತರ ವಿದ್ಯಾರ್ಥಿಗಳಿಗೆ ಅನ್ನ, ಅಕ್ಷರ, ಆಶ್ರಯ ನೀಡಿದ ಮಹಾತ್ಮರು ಎಂದು ಬಣ್ಣಿಸಿದರು.

ಪ್ರಸ್ತುತ ಸಂದರ್ಭದಲ್ಲಿ ರಾಜಕಾರಣ ಮತ್ತು ಧರ್ಮಕಾರಣ ಕಲುಷಿತಗೊಂಡಿದ್ದು, ಇವೆರಡೂ ಶುದ್ಧೀಕರಣವಾಗಬೇಕಿದೆ. ಅಶುದ್ಧ ವ್ಯಕ್ತಿಗಳಿರುವ ಕಾರಣ ರಾಜಕಾರಣ ಕೆಟ್ಟಿದ್ದು, ಧರ್ಮದ ಬಗ್ಗೆ ಅಪಾರ್ಥ ಮಾಡಿಕೊಂಡವರಿಂದ ಧರ್ಮಕಾರಣ ಕೆಟ್ಟಿದೆಯೇ ಹೊರತು ಧರ್ಮಕಾರಣ ಎಂದಿಗೂ ಕೆಡುವುದಿಲ್ಲ ಎಂದು ಹೇಳಿದರು.

ದಾವಣಗೆರೆ ಈ ಹಿಂದೆ ಚಳವಳಿ ನಗರಿ, ವ್ಯಾಪಾರಿ ನಗರಿಯಾಗಿ ನಂತರದಲ್ಲಿ ಶಿಕ್ಷಣ ನಗರಿಯಾಗಿದ್ದು, ಇದರೊಟ್ಟಿಗೆ ದಾನ ಧರ್ಮದ ನಗರ ಕೂಡ ಆಗಿದೆ. ಜಯದೇವ ಜಗದ್ಗುರು, ಬಕ್ಕೇಶ್ವರ ಶ್ರೀ ಸೇರಿದಂತೆ ಅನೇಕ ಸ್ವಾಮೀಜಿಯವರು ದಾನ, ಧಾರ್ಮಿಕ ನಗರವಾಗಲು ಕಾರಣರಾಗಿದ್ದಾರೆ. ದಾವಣಗೆರೆಯಲ್ಲೂ ದಾಸೋಹ ಸಂಸ್ಕೃತಿ ಬೆಳೆಯಲು ಮೂಲ ಪ್ರೇರಣೆ ಸಿದ್ಧಗಂಗಾ ಶ್ರೀಗಳು. ಅವರ ಹೆಸರನ್ನು ವೃತ್ತಕ್ಕೆ ಇಟ್ಟಿರುವುದು ಸಂತಸದ ವಿಚಾರ ಎಂದರು.

ಸಾನ್ನಿಧ್ಯ ವಹಿಸಿದ್ದ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ತ್ರಿವಿಧ ದಾಸೋಹಿ ಡಾ. ಶಿವಕುಮಾರ ಮಹಾಸ್ವಾಮಿಗಳಿಗೆ ದೇಶದ ಅತ್ಯುನ್ನತ 'ಭಾರತ ರತ್ನ' ಪ್ರಶಸ್ತಿಯನ್ನು ಇದೇ ದಿನಾಂಕ 26 ರೊಳಗೆ ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು. (4ನೇ ಪುಟಕ್ಕೆ)

# ಆರೆಸ್ಸೆಸ್ ಸಿದ್ಧಾಂತ ಹಿಮ್ಮೆಟ್ಟಿಸೋಣ

## ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಅಭಿಯಾನದಲ್ಲಿ ಸಿದ್ದರಾಮಯ್ಯ ಕರೆ

ಬೆಂಗಳೂರು, ಜ. 21- ಸಂವಿಧಾನ ದ್ವೇಷಿಯಾಗಿರುವ ಆರ್‌ಎಸ್‌ಎಸ್ ಸಿದ್ಧಾಂತವನ್ನು ಬಿಜೆಪಿ ಭಾರತೀಯರ ಮೇಲೆ ಹೇರುತ್ತಿದ್ದು ಇದನ್ನು ಹಿಮ್ಮೆಟ್ಟಿಸೋಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ.

ಬಿಜೆಪಿ ಪರಿವಾರ ಭಾರತದಲ್ಲಿ ಬಹಳ ವ್ಯವಸ್ಥಿತವಾಗಿ ಒಡಕು ತರುತ್ತಿದೆ, ಭಾರತೀಯರ ನಡುವೆ ಬಿರುಕು ಮೂಡಿಸುತ್ತಿದೆ. ಹಲವು ಭಾಷೆ, ಜಾತಿ, ಧರ್ಮ ಭಾರತದ ಶಕ್ತಿ.

ಬಿಜೆಪಿ ಪರಿವಾರ ಗಾಂಧಿ, ಅಂಬೇಡ್ಕರ್‌ರನ್ನು ದ್ವೇಷಿಸುತ್ತದೆ, ನಾವು ಇವರಿಬ್ಬರ ಆಶಯಗಳನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುತ್ತೇವೆ, ವಿಸ್ತರಿಸುತ್ತೇವೆ ಎಂದರು.

ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಅಭಿಯಾನ ಉದ್ಘಾಟನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾವು ಸಂವಿಧಾನ ರಕ್ಷಿಸಿದರೆ, ಸಂವಿಧಾನ ನಮ್ಮೆಲ್ಲರನ್ನೂ ರಕ್ಷಿಸುತ್ತದೆ, ನಮಗೆ ಚುನಾವಣೆ ಗೆಲ್ಲುವುದಕ್ಕಿಂತ ನಮ್ಮ ಸಿದ್ಧಾಂತ ಗೆಲ್ಲಬೇಕು, ಅದು ಮಾತ್ರ ನಮ್ಮ ನಿಜವಾದ ಗೆಲುವು ಎಂದರು. ಭಾರತೀಯರ ನಡುವೆ ಬಿರುಕು ಮೂಡಿ ಸುತ್ತಾ ಭಾರತವನ್ನು ದುರ್ಬಲಗೊಳಿಸುತ್ತಿದೆ, ಬಿಜೆಪಿಯ ಈ ಯತ್ನವನ್ನು ನಾವು ಸೋಲಿಸಬೇಕು, ಇದಕ್ಕೆ ಗಾಂಧಿ-ಅಂಬೇಡ್ಕರ್ ನಮಗೆ ಮಾರ್ಗದರ್ಶಕರು.

ಸಂವಿಧಾನ ಜಾರಿಯಾದಾಗ ಬಿಜೆಪಿ ಪರಿವಾರ ಅಂಬೇಡ್ಕರ್ ಭಾವಚಿತ್ರವನ್ನು, ಸಂವಿಧಾನವನ್ನು ಸುಟ್ಟಿತ್ತು, ಇದನ್ನು ಈ ದೇಶ ಮತ್ತು ದೇಶದ ಜನಸಮುದಾಯ ಯಾವತ್ತೂ ಕ್ಷಮಿಸುವುದಿಲ್ಲ, ಮರೆಯುವುದಿಲ್ಲ ಎಂದರು.

ಗಾಂಧಿ, ಅಂಬೇಡ್ಕರ್ ಆಶಯ, ಮೌಲ್ಯಗಳ ಈಡೇರಿಕೆಗೆ ನಾವು ಕಾರ್ಯಕ್ರಮಗಳನ್ನು ರೂಪಿಸಿ ಜಾರಿ ಮಾಡಿದ್ದೇವೆ, ಇದಕ್ಕಾಗಿ ಬಜೆಟ್‌ನಲ್ಲಿ 52 ಸಾವಿರ ಕೋಟಿ ರೂ.ಗಳಿಗೂ ಅಧಿಕ ಮೊತ್ತವನ್ನು ನೇರವಾಗಿ ಜನರ ಖಾತೆಗೆ ಹಾಕಿ ರಾಜ್ಯದ ಜನರನ್ನು ಆರ್ಥಿಕವಾಗಿ ಸಬಲರನ್ನಾಗಿಸಿದ್ದೇವೆ ಎಂದರು.



# ಸ್ಥಳೀಯ ಸಂಸ್ಥೆ ಚುನಾವಣೆ ನಡೆಸಿ ಪಕ್ಷ ಬಲಪಡಿಸಲು ಖರ್ಗೆ ಕರೆ

ಬೆಂಗಳೂರು, ಜ. 21- ಜಿಲ್ಲಾ, ತಾಲ್ಲೂಕು ಪಂಚಾಯತ್ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಿ ಪಕ್ಷವನ್ನು ಮತ್ತಷ್ಟು ಬಲಪಡಿಸುವಂತೆ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಂದಿಲ್ಲಿ ಕರೆ ನೀಡಿದ್ದಾರೆ.

ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಸಮಾವೇಶದಲ್ಲಿ ಮಾತನಾಡಿದ ಅವರು, ತಮ್ಮ ಭಾಷಣದುದ್ದಕ್ಕೂ ಗಾಂಧಿ, ಅಂಬೇಡ್ಕರ್ ವಿರೋಧಿ ಬಿಜೆಪಿ, ಆರ್‌ಎಸ್‌ಎಸ್ ಹಾಗೂ ಹಿಂದೂ ಮಹಾಸಭಾ ಎಂದು ಕಟುವಾಗಿ ಟೀಕಿಸಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಗಟ್ಟಿಯಾಗಿ ನೆಲೆಯೂರಿದೆ, ಇಲ್ಲಿನ ಸರ್ಕಾರ ನೀಡುತ್ತಿರುವ ಕಾರ್ಯಕ್ರಮಗಳನ್ನು ದೇಶದ ಎಲ್ಲಿಯೂ ನೀಡುತ್ತಿಲ್ಲ.

ಇಲ್ಲಿನ ಕಾಂಗ್ರೆಸ್ ಸರ್ಕಾರ ಬೇರೆ ರಾಜ್ಯಗಳಿಗೆ ಮಾದರಿಯಾಗಿದೆ, ಇದರಿಂದ ಪಕ್ಷ ದಿನದಿಂದ ದಿನಕ್ಕೆ ಬಲಿಷ್ಠಗೊಳ್ಳುತ್ತಿದೆ.

ಪಕ್ಷ ಮತ್ತು ಸರ್ಕಾರ ಬಲಿಷ್ಠಗೊಳ್ಳಲು, ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು, ಮುಖ್ಯಮಂತ್ರಿ ಹಾಗೂ ಕಾರ್ಯಕರ್ತರೇ ಕಾರಣ. ನಿಮ್ಮ ಇದೇ ಒಗ್ಗಟ್ಟನ್ನು ಮುಂದುವರೆಸಿ ಮುಂಬರುವ ಪಂಚಾಯತ್ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸಿ, ನಿಮ್ಮ ಹೋರಾಟಕ್ಕೆ ಜನ ಬೆಂಬಲ ದೊರೆಯಲಿದೆ ಎಂದರು.

ಅಂಬೇಡ್ಕರ್ ಹೆಸರನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಅನ್ನು ವಿಭಜಿಸುವ ಕೆಲಸ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಮಾಡುತ್ತಿದೆ, ಸುಳ್ಳು ಪ್ರಚಾರಗಳ ಮೂಲಕ ನಮ್ಮನ್ನು ಕುಗ್ಗಿಸುವ ಕೆಲಸ ಮಾಡುತ್ತಿದ್ದಾರೆ. ಇದಕ್ಕೆಲ್ಲ ಮುಂದಿನ ಅಧಿವೇಶನದಲ್ಲಿ ಉತ್ತರ ನೀಡುತ್ತೇನೆ, ನಮ್ಮನ್ನು ಇನ್ನು ಕೆಣಕಬೇಡಿ, ಮತ್ತೆ (4ನೇ ಪುಟಕ್ಕೆ)

# ಚೌಡಯ್ಯ, ವೇಮನರ ಆದರ್ಶಗಳು ಮಾದರಿ



**ಶ್ರೀ ಮಹಾಯೋಗಿ ವೇಮನ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಜಯಂತಿಯಲ್ಲಿ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ**

ದಾವಣಗೆರೆ, ಜ.21- ವೇಮನರ ತತ್ವ ಸಂದೇಶಗಳ ಜ್ಞಾನ ಮತ್ತು ಜಾಗೃತಿ ಜನರಲ್ಲಿ ಮೂಡಬೇಕು. ಶಾಂತಿ, ಸಮಾನತೆ ಹಾಗೂ ಸೌಹಾರ್ದತೆ ಮೂಡಬೇಕೆಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ.ಜಿ.ಎಂ ಹೇಳಿದರು.

ಮಂಗಳವಾರ ಜಿಲ್ಲಾಡಳಿತ ಭವನ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಗಂಗಾಮತಸ್ಥರ ಸಂಘ, ಶ್ರೀಮಹಾಯೋಗಿ ವೇಮನ ಸಮಾಜ ದಾವಣಗೆರೆ ಇವರ ಸಹಯೋಗದಲ್ಲಿ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ನಡೆದ ಶ್ರೀಮಹಾಯೋಗಿ ವೇಮನ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಉದ್ಘಾಟಿಸಿ ಮಾತನಾಡಿದರು.

ನೇರ ನಿಷ್ಠುರವಾದಿಗಳಾಗಿ ಸಮ ಸಮಾಜದ ನಿರ್ಮಾಣವನ್ನು ಪ್ರತಿಪಾದಿಸಿದ ನಿಜಶರಣ ಅಂಬಿಗರ ಚೌಡಯ್ಯ ಹಾಗೂ ಮಹಾಯೋಗಿ ವೇಮನರ ಆದರ್ಶಗಳು ಇಂದಿನ ಸಮಾಜಕ್ಕೆ ಮಾದರಿಯಾಗಿದೆ. ನಿಜಶರಣ ಅಂಬಿಗರ ಚೌಡಯ್ಯನವರು 12 ನೇ ಶತಮಾನದಲ್ಲಿಯೇ ಜಾತಿಯತೆ, ಮೌಢ್ಯತೆಯನ್ನು ಖಂಡಿಸಿ ತಮ್ಮ ಹೆಸರನ್ನೇ ಅಂಕಿತವನ್ನಾಗಿಟ್ಟುಕೊಂಡಿರುವ ವಿಭಿನ್ನ ವ್ಯಕ್ತಿತ್ವದ ಶ್ರೇಷ್ಠ ವಚನಕಾರರಾದ ಇವರ ತತ್ವಾದರ್ಶಗಳು ಇಂದಿನ ಸಮಾಜಕ್ಕೆ ಮಾದರಿಯಾಗಿವೆ ಎಂದರು.


ವೇಮನರ ಮಾತುಗಳು ಬರಿಯ ಮಾತುಗಳಲ್ಲ, ಅವುಗಳು ವೇದವೇ ಆಗಿವೆ. ನಮ್ಮ ಹಿರಿಯರು ವೇಮನರ ಕುರಿತು ವೇದಾತೀತನು ವೇಮನು ಕಾಣಾ ವೇಮನ ಮಾತದು, ವೇದವು ಕಾಣಾ ಎಂದು ಹಾಡಿದ್ದಾರೆ.

ನಿಜಶರಣ ಅಂಬಿಗರ ಚೌಡಯ್ಯ, ಅಲ್ಲಮಪ್ರಭು, ಬಸವಣ್ಣರ ಕಾಲದಲ್ಲಿ ದಿಟ್ಟತನದಲ್ಲಿ ಸಮಾಜದ ಓರೆ ಕೋರೆಗಳನ್ನು ತಿದ್ದುವಲ್ಲಿ ಸಫಲರಾಗಿದ್ದಾರೆ. ಇವರ ವಚನ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ ಎಂದರು.

ಮಾರುತಿ ಸಾಲಿಮಠ ಅವರು ನಿಜಶರಣ ಅಂಬಿಗರ ಚೌಡಯ್ಯನವರ ಕುರಿತು, ಸುಮತಿ ಜಯಪ್ಪ ಅವರು ಶ್ರೀ ಮಹಾಯೋಗಿ ವೇಮನವರ ಕುರಿತು ಉಪನ್ಯಾಸ ನೀಡಿದರು.

ಪಾಲಿಕೆ ಮೇಯರ್ ಕೆ. ಚಮನ್ ಸಾಬ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ವಕೀಲ ಎಸ್. ಪರಮೇಶ್, ಸಮಾಜದ ಮುಖಂಡರಾದ ಹನುಮಂತಪ್ಪ, ಮಂಜಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಜನ್ಮಸಿದ್ಧ ಪೌರತ್ವ ಅಂತ್ಯಕ್ಕೆ ಆದೇಶ



ವಾಷಿಂಗ್ಟನ್ ಜ.21- ಅಮೆರಿಕದ 47ನೇ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಮೊದಲ ದಿನವೇ ಡೊನಾಲ್ಡ್ ಟ್ರಂಪ್ ಮಹತ್ವದ ಆದೇಶ ಒಂದನ್ನು ಹೊರಡಿಸಿದ್ದು, ಜನ್ಮಸಿದ್ಧ ಪೌರತ್ವ ಹಕ್ಕನ್ನು ರದ್ದುಗೊಳಿಸಿದ್ದಾರೆ.

ಕಾರ್ಯಕಾರಿ ಆದೇಶದ ಮೂಲಕ ಅವರು ತೆಗೆದುಕೊಂಡಿರುವ ಕ್ರಮ ಕಾನೂನು ತೊಡಕನ್ನು ಎದುರಿಸಬೇಕಾಗಿದೆ. ಇದೇ ವೇಳೆ ಡೊನಾಲ್ಡ್ ಟ್ರಂಪ್ ವಲಸೆಗೆ ಸಂಬಂಧಿಸಿದ ಹಲವು ಕಾಯ್ದೆಗಳನ್ನು ಬದಲಿಸಲು ಆದೇಶ ಹೊರಡಿಸಿದ್ದಾರೆ.

ಸಂವಿಧಾನದ 14ನೇ ತಿದ್ದುಪಡಿ ಮೂಲಕ ಅಮೆರಿಕದಲ್ಲಿ ಜನಿಸಿದ ಎಲ್ಲರಿಗೂ ಪೌರತ್ವ ನೀಡಲಾಗುತ್ತಿತ್ತು. ಈ ತಿದ್ದುಪಡಿಯನ್ನು ಬದಲಿಸಲು ಟ್ರಂಪ್ ಆದೇಶ ಹೊರಡಿಸಿದ್ದಾರೆ.

ದಾಖಲೆ ರಹಿತವಾದ ಪೋಷಕರಿಗೆ ಜನಿಸಿದ ಮಕ್ಕಳಿಗೆ ಪೌರತ್ವ ನೀಡುವುದಿಲ್ಲ ಎಂದು ಟ್ರಂಪ್ ಆದೇಶ ಹೊರಡಿಸಿದ್ದಾರೆ. ಅವರ (4ನೇ ಪುಟಕ್ಕೆ)

# ಸಂವಿಧಾನ ರಚನೆಗೆ ಬ್ರಾಹ್ಮಣರ ಕೊಡುಗೆ

**ಅಂಬೇಡ್ಕರ್ ಹೇಳಿಕೆ ಉಲ್ಲೇಖಿಸಿದ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್**

ಬೆಂಗಳೂರು, ಜ. 21- ಭಾರತದ ಸಂವಿಧಾನ ರಚನೆಯಲ್ಲಿ ಬ್ರಾಹ್ಮಣರು ನೀಡಿರುವ ಕೊಡುಗೆಯ ಬಗ್ಗೆ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೇಳಿಕೆಯ ಮೂಲಕ ಗಮನ ಸೆಳೆದಿದ್ದಾರೆ.

ನಗರದಲ್ಲಿ ಆಯೋಜಿಸಿರುವ 'ವಿಶ್ವ ಮಿತ್ರ' ಎರಡು ದಿನಗಳ ಬ್ರಾಹ್ಮಣರ ಸಮಾವೇಶದಲ್ಲಿ ಅವರು ಮಾತನಾಡುತ್ತಿದ್ದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾದ ಸುವರ್ಣ ಮಹೋತ್ಸವದ ಹಿನ್ನೆಲೆ ಯಲ್ಲಿ ಈ ಸಮಾರಂಭ ಆಯೋಜಿಸಲಾಗಿತ್ತು.

ಬಿ.ಎನ್. ರಾವ್ ಅವರು ಸಂವಿಧಾನದ ತಿರುಳನ್ನು ಸಿದ್ಧಪಡಿಸದೇ ಹೋಗಿದ್ದಿದ್ದರೆ ಸಂವಿಧಾನ ರಚನೆಗೆ 25 ವರ್ಷ (4ನೇ ಪುಟಕ್ಕೆ)

# ಎಸ್ಸೆಸ್‌ಗೆ ಆವರಗೊಳ್ಳ ಶ್ರೀಗಳಿಂದ ಗುರುರಕ್ಷೆ



ದಾವಣಗೆರೆ, ಜ. 21 - ಆವರಗೊಳ್ಳದ ಶ್ರೀ ಷ.ಬ್ರ. ಓಂಕಾರ ಶಿವಾಚಾರ್ಯ ಸ್ವಾಮೀಜಿ ಅವರು ವೀರಶೈವ-ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪನವರನ್ನು ಇಂದು ನಗರದ ಅವರ ನಿವಾಸದಲ್ಲಿ ಭೇಟಿ ಮಾಡಿ, ಯೋಗಕ್ಷೇಮ ವಿಚಾರಿಸಿದರು. ಎಸ್ಸೆಸ್ ಅವರು ಶತಾಯುಷಿಗಳಾಗಲಿ ಎಂದು ಗುರುರಕ್ಷೆ ನೀಡಿದರು.


ಉದ್ಘಾಟನಾ ಸಮಾರಂಭದ ಆಮಂತ್ರಣ

ನೂತನ ಆಸ್ಪತ್ರೆಯ ಉದ್ಘಾಟನಾ ಸಮಾರಂಭಕ್ಕೆ
ಪ್ರೀತಿಯ ಆಹ್ವಾನ






ಆರೈಕೆ ಆಸ್ಪತ್ರೆ

ಚಳ್ಳಕೆರೆ - ದಾವಣಗೆರೆ ಮುಖ್ಯರಸ್ತೆ, ಜಗಳೂರು.

WEDNESDAY 22 2025 JANUARY

ಸಮಯ : ಮಧ್ಯಾಹ್ನ 12 ಗಂಟೆಗೆ

ಡಾ. ರವಿಕುಮಾರ್ ಟಿ.ಜಿ. ಮತ್ತು ಮಕ್ಕಳು
ಶ್ರೀಮತಿ ಮಂಜುಳಮ್ಮ ಮತ್ತು ಶ್ರೀ ಟಿ. ಗುರುಸಿದ್ಧನಗೌಡ್ರು, ಮಾಜಿ ಶಾಸಕರು
ಪ್ರೀತಿ ಆರೈಕೆ ಟ್ರಸ್ಟ್ – ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
ಶ್ರೀ ಅರವಿಂದ್ ಕುಮಾರ್ ಟಿ.ಜಿ. ಮತ್ತು ಕುಟುಂಬ
ಶ್ರೀ ಪ್ರವೀಣ್ ಪಾಟೀಲ ಮತ್ತು ಕುಟುಂಬ
ಆರೈಕೆ ಸಮೂಹ ಸಂಸ್ಥೆಗಳು, ದಾವಣಗೆರೆ.

# ನಿರ್ಲಕ್ಷ್ಯತೆ, ಮಾಹಿತಿ ಕೊರತೆಯಿಂದ ಬ್ಯಾಂಕ್ ದರೋಡೆ ಹೆಚ್ಚಳ

## ಭದ್ರತಾ ಮಾನದಂಡಗಳನ್ನು ಎಲ್ಲಾ ಬ್ಯಾಂಕ್‌ಗಳು ಪಾಲನೆ ಮಾಡುವುದು ಕಡ್ಡಾಯ : ಎಸ್ಪಿ ಉಮಾ ಪ್ರಶಾಂತ್





ದಾವಣಗೆರೆ, ಜ. 21 - ಬ್ಯಾಂಕ್‌ಗಳ ದರೋಡೆ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಿದ್ದು ಭದ್ರತಾ ಮಾನದಂಡದ ಜೊತೆಗೆ ಸಿಬ್ಬಂದಿಗಳ ಮಾಹಿತಿ ಸಂಗ್ರಹದಲ್ಲಿ ನಿರ್ಲಕ್ಷ್ಯತೆ ಕಾರಣವಾಗಿದೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಜಿಲ್ಲಾ ಮಟ್ಟದ ಬ್ಯಾಂಕ್‌ಗಳ ಭದ್ರತೆಗಾಗಿ ಬ್ಯಾಂಕಿನ ಎಲ್ಲಾ ವ್ಯವಸ್ಥಾಪಕರುಗಳಿಗೆ ಆಯೋಜಿಸಲಾಗಿದ್ದ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಬ್ಯಾಂಕಿನ ವ್ಯವಸ್ಥಾಪಕರುಗಳು ಬ್ಯಾಂಕ್‌ಗೆ ಬೇಕಾದ ಹೈ ಸೆಕ್ಯೂರಿಟಿ, ಸಿಸಿ ಕ್ಯಾಮೆರಾಗಳ ಜೊತೆಗೆ ಅಲರಾಮ್‌ಗಳನ್ನು ಅಳವಡಿಸಿಕೊಳ್ಳಬೇಕು. ಬ್ಯಾಂಕ್‌ನ ಸೆಕ್ಯೂರಿಟಿ ಸಿಬ್ಬಂದಿಯ ಮಾಹಿತಿ ಸಂಗ್ರಹದ ಜೊತೆಗೆ, ಹತ್ತಿರದ ಪೊಲೀಸ್ ಠಾಣೆಯೊಂದಿಗೆ ಸೆಕ್ಯೂರಿಟಿ ಕುರಿತು ಚರ್ಚಿಸಬೇಕಾಗುತ್ತದೆ ಎಂದರು.

ಬ್ಯಾಂಕ್‌ನ ಒಳಗೆ ಸ್ಟ್ರಾಂಗ್ ರೂಂ, ಡಿಜಿಲಾಕರ್, ಸ್ಮೋಕ್ ಡಿಟೆಕ್ಟರ್ಗಳು, ಹೀಟ್ ಡಿಟೆಕ್ಟರ್‌ಗಳು, ಬ್ಯಾಂಕುಗಳ ಬಳಿ ಯಾರಾದರೂ ಅನುಮಾನಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ಅಂತಹವರ ಮಾಹಿತಿಯನ್ನು ಪೊಲೀಸ್ ಠಾಣೆಗಳಿಗೆ ನೀಡುವಂತೆ ಬ್ಯಾಂಕ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ತಿಳಿಸಿ ಸ್ಟ್ರಾಂಗ್ ರೂಮ್‌ಗೆ ಬ್ಯಾಂಕ್ ಅಧಿಕಾರಿ ಮತ್ತು ಸಿಬ್ಬಂದಿಗಳು ಪ್ರತಿದಿನ ಭೇಟಿ ನೀಡುವ ನಮೂನೆಯಲ್ಲಿ ದಾಖಲು ಮಾಡಬೇಕು. ಬ್ಯಾಂಕ್‌ಗಳಿಗೆ ಪ್ರತಿದಿನ ಬೀಟ್ ಪೊಲೀಸರು ಭೇಟಿ ನೀಡುವ ಬಗ್ಗೆ ಇ-ಬೀಟ್ ವ್ಯವಸ್ಥೆ ಮಾಡುವುದು. ಪ್ರತಿ ಬೀಟ್ ಸಿಬ್ಬಂದಿಗಳು ಭೇಟಿ ನೀಡುತ್ತಿರುವ ಬಗ್ಗೆ ರಾತ್ರಿ ಗಸ್ತಿನ ಉಸ್ತುವಾರಿ ಅಧಿಕಾರಿಗಳು ಕಡ್ಡಾಯವಾಗಿ ಪರಿಶೀಲನೆ ಮಾಡಲು ಸೂಚನೆ ನೀಡಿದರು.

ಜಿಲ್ಲಾ ಕಂಟ್ರೋಲ್ ರೂಂನವರು ಪ್ರತಿದಿನ ಬ್ಯಾಂಕ್‌ಗಳಿಗೆ ಬೀಟ್ ಸಿಬ್ಬಂದಿಗಳು ಹಾಗೂ ರಾತ್ರಿ ಗಸ್ತಿನ ಅಧಿಕಾರಿಗಳು ಭೇಟಿ ನೀಡುತ್ತಿರುವ ಬಗ್ಗೆ ಕಡ್ಡಾಯವಾಗಿ ಮಾಹಿತಿ ಪಡೆದು ನಮೂದು ಮಾಡುವುದು. ಹೊರವಲಯಗಳಲ್ಲಿರುವ ಬ್ಯಾಂಕ್‌ಗಳಿಗೆ ಕಡ್ಡಾಯವಾಗಿ ಭೇಟಿ ನೀಡಬೇಕೆಂದು ಸೂಚನೆ ನೀಡಿದರು.

ಠಾಣಾ ವ್ಯಾಪ್ತಿಯ ಪಿಐ ಮತ್ತು ಪಿಎಸ್‌ಐ ರವರು ಸೆಕ್ಯೂರಿಟಿ ಆಡಿಟ್ ವರದಿಯನ್ನು ಕಡ್ಡಾಯವಾಗಿ ಪಡೆದು ಜಿಲ್ಲಾ ಪೊಲೀಸ್ ಕಚೇರಿಗೆ ಕಳುಹಿಸಿಕೊಡಬೇಕು. ಬ್ಯಾಂಕುಗಳ ಒಳಭಾಗ ಮತ್ತು ಹೊರಭಾಗದಲ್ಲಿ, ಎಟಿಎಂ ಇರುವ ಕಡೆಗಳಲ್ಲಿ ಕಡ್ಡಾಯವಾಗಿ ಮೋಷನ್ ಸಿಸಿ ಟಿವಿಗಳನ್ನು ಅಳವಡಿಸಿ ಈ ಛಾಯಾಚಿತ್ರ ಮತ್ತು ರೆಕಾರ್ಡಿಂಗನ್ನು ಡ್ರೈವ್‌ನಲ್ಲಿ ಸೇವ್ ಮಾಡುವಂತೆ ತಿಳಿಸಿದರು.

ಸಭೆಯಲ್ಲಿ ಮಹಾಪೌರ ಕೆ. ಚಮನ್‌ಸಾಬ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಉಪ ಪೊಲೀಸ್ ಅಧೀಕ್ಷಕ ಮಂಜುನಾಥ್, ಎಎಸ್‌ಪಿ ಸ್ಯಾಮ್ ವರ್ಗೀಸ್ ಮತ್ತು ವಿವಿಧ ಬ್ಯಾಂಕ್‌ಗಳ ವ್ಯವಸ್ಥಾಪಕರು ಭಾಗವಹಿಸಿದ್ದರು.

## ಜಯ ಕರ್ನಾಟಕ ಸಂಘಟನೆಯಿಂದ ಉಪ ಸಭಾಪತಿ ಲಮಾಣಿಗೆ ಮನವಿ



ಹರಿಹರ, ಜ.21- ತಾಲ್ಲೂಕು ಜಯ ಕರ್ನಾಟಕ ಸಂಘಟನೆ ವತಿಯಿಂದ ನಗರದ ಗಾಂಧಿ ಮೈದಾನ ವಾಣಿಜ್ಯ ಮಳಿಗೆಗಳನ್ನು ಕೂಡಲೇ ಮರು ಹರಾಜು ಮಾಡುವಂತೆ ಆಗ್ರಹಿಸಿ, ದಾವಣಗೆರೆಯ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಮಂಗಳವಾರ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಅಲ್ಲಿರುವ ವಾಣಿಜ್ಯ ಮಳಿಗೆಗಳ ಕರಾರು ಮುಗಿದು 5 ವರ್ಷಗಳೇ ಕಳೆದಿವೆ ಮತ್ತು ಕಾನೂನು ರೀತಿಯ ಮರು ಹರಾಜು ಪ್ರಕ್ರಿಯೆ ನಡೆಸುವಂತೆ ಹೈಕೋರ್ಟ್‌ನಿಂದ ಸೂಚನೆ ನೀಡಿದ್ದರೂ ಸಂಬಂಧಿಸಿದ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ದೂರಿದರು.

ಇದೇ ವೇಳೆ ಉಪಸಭಾಪತಿ ರುದ್ರಪ್ಪ ಲಮಾಣಿ ಪ್ರತಿಭಟನಾಕಾರರ ಧರಣಿಯನ್ನು ಗಮನಿಸಿ, ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿ, ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಬಳಿ ಚರ್ಚಿಸುವುದಾಗಿ ಧರಣಿ ನಿರತರಿಗೆ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಂಘಟನೆಯ ತಾಲ್ಲೂಕು ಅಧ್ಯಕ್ಷ ಎಸ್. ಗೋವಿಂದ, ಉಪಾಧ್ಯಕ್ಷ ಎಂ.ಆರ್. ಆನಂದ್, ಪ್ರಧಾನ ಕಾರ್ಯದರ್ಶಿ ಸಿ.ಹೆಚ್. ಸುನಿಲ್ ಕುಮಾರ್, ಸಂಘಟನಾ ಕಾರ್ಯದರ್ಶಿ ಎಂ. ಮಧು, ವಿದ್ಯಾರ್ಥಿ ಘಟಕದ ಅಧ್ಯಕ್ಷ ಹೆಚ್. ಶ್ರೀನಿವಾಸ್, ಸಾಗರ್, ಆಕಾಶ್, ನವಾಜ್, ಫೈರೋಜ್, ಸಮೀವುಲ್ಲಾ, ಸಂಜೀವಪ್ಪ ಇತರರು ಇದ್ದರು.

## ಪಾಲಿಕೆಯಿಂದ ಹೊಸ ಟ್ರ್ಯಾಕ್ಟರ್ ವಿತರಣೆ



ದಾವಣಗೆರೆ, ಜ. 21- ಮಹಾನಗರ ಪಾಲಿಕೆಯಿಂದ ವಾರ್ಡ್ ನಂ. 23 ಮತ್ತು 44ರ ತ್ಯಾಜ್ಯ ವಿಲೇವಾರಿಗೆ ಹೊಸ ಟ್ರ್ಯಾಕ್ಟರ್ ನೀಡಿದ್ದು, ಎಸ್ ನಿಜಲಿಂಗಪ್ಪ ಲೇಔಟ್‌ನ ಶ್ರೀ ಗಣೇಶ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರ (ಪರಿಸರ ) ಜಗದೀಶ್ ಚಾಲನೆ ನೀಡಿದರು.

ಈ ಸಮಯದಲ್ಲಿ ವಾರ್ಡ್‌ನ ಆರೋಗ್ಯ ನಿರೀಕ್ಷಕರು, ಸಿಬ್ಬಂದಿಗಳು ಮತ್ತು ನಾಗರಿಕರು ಹಾಜರಿದ್ದರು.

## ಷೇರು ಪೇಟೆ ಕುಸಿತ: 7.52 ಲಕ್ಷ ಕೋಟಿ ರೂ. ಕಳೆದುಕೊಂಡ ಹೂಡಿಕೆದಾರರು

ನವದೆಹಲಿ, ಜ.21- ಬಿಎಸ್‌ಇ ಷೇರು ಸೂಚ್ಯಂಕ 1,235 ಅಂಕಗಳಷ್ಟು ಭಾರಿ ಕುಸಿತ ಕಂಡಿದೆ. ಇದರಿಂದಾಗಿ ಹೂಡಿಕೆದಾರರ ಷೇರು ಮೌಲ್ಯ 7.52 ಲಕ್ಷ ಕೋಟಿ ರೂ.ಗಳಷ್ಟು ಕರಗಿದೆ. ಬಿಎಸ್‌ಇ ಸೂಚ್ಯಂಕದಲ್ಲಿ ಇರುವ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ 7,52,520.34 ಕೋಟಿ ರೂ.ಗಳಷ್ಟು ಕಡಿಮೆಯಾಗಿದೆ. ವಹಿವಾಟು ನಡೆದ 4088 ಶೇರುಗಳ ಪೈಕಿ 2881ರ ಮೌಲ್ಯ ಇಳಿಕೆಯಾಗಿದೆ. ಬಿಎಸ್‌ಇ ಸೂಚ್ಯಂಕ 1235.08 ಅಂಕಗಳಷ್ಟು ಕುಸಿದು 75,838 .36 ಅಂಕಗಳಿಗೆ ಇಳಿಕೆಯಾಗಿದೆ. ಒಟ್ಟಾರೆ ಇಳಿಕೆ ಶೇಕಡ 1.60ರಷ್ಟು ಆಗಿದೆ.


ಹನ್ನೊಂದನೇ ವರ್ಷದ ಸವಿನೆನಪು



ದಿ|| ಎಂ.ಆರ್. ಮಂಜುನಾಥ ಶೆಟ್ಟಿ

ನೀವು ನಮ್ಮನ್ನಗಲಿ (22-1-2014) ಹನ್ನೊಂದು ವರ್ಷಗಳು ಕಳೆದವು.

ಸದಾ ನಿಮ್ಮ ಸ್ಮರಣೆಯಲ್ಲಿರುವ,

✦ ಪುತ್ರ : ಎಂ.ಎಂ. ರವಿಚಂದ್ರ ✦ ಸೊಸೆ : ಶ್ರೀಮತಿ ವಿದ್ಯಾಶ್ರೀ ರವಿಚಂದ್ರ

✦ ಶ್ರೀಮತಿ ಛಾಯಾ ರಜತ್ ✦ ಶ್ರೀಮತಿ ರಾಜಲಕ್ಷ್ಮಿ ಪವನ್

✦ ಶ್ರೀಮತಿ ಸರಸ್ವತಿ ರುದ್ರೇಶ್ ✦ ಮೊಮ್ಮಕ್ಕಳಾದ : ಆರ್ವಿ ಎಂ.ಆರ್. ರಿಷನ್‌ವಿಷ್ಣು ಜಿ.ಆರ್., ವಿವಾನ್ ಪಿ.ಎಸ್., ಸಾಯಿಪ್ರಣವ್ ಆರ್.ಬಿ. ಆರ್ಯನ್

ಎಂ.ಆರ್. ಮಂಜುನಾಥ ಶೆಟ್ಟಿ ಅಂಡ್ ಸನ್

DURBY

667/4, ಕೆನರಾ ಬ್ಯಾಂಕ್ ಎದುರು, ಕೆ.ಆರ್. ರಸ್ತೆ, ದಾವಣಗೆರೆ-577 001. ಫೋ. : 08192-276731



ಆರ್.ಡಿ. ಸಂಕೇತ್ ನಿಧನ



ನಮ್ಮ ಹಿರಿಯ ಸಹೋದರ ದಿ|| ಆರ್.ಎಸ್. ದಯಾನಂದ ಅವರ ಪುತ್ರ

ಆರ್. ಡಿ. ಸಂಕೇತ್

ಇವರು ದಿನಾಂಕ 21.01.2025ರ ಮಂಗಳವಾರ ಸಂಜೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 34 ವರ್ಷ ವಯಸ್ಸಾಗಿತ್ತು. ಮೃತರು ತಾಯಿ, ಓರ್ವ ಸಹೋದರಿ ಮತ್ತು ಭಾವ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ದೇಹವನ್ನು ಅಂತಿಮ ದರ್ಶನಕ್ಕೆ 22.01.2025ರ ಬುಧವಾರ ಮಧ್ಯಾಹ್ನ 12 ರಿಂದ 2-30ರವರೆಗೆ ದಾವಣಗೆರೆ ಎಸ್. ಎಸ್. ಬಡಾವಣೆ 'ಬಿ' ಬ್ಲಾಕ್‌ನ # 4771/21, 4ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆಯಲ್ಲಿರುವ (ರಾಘವೇಂದ್ರ ನರ್ಸಿಂಗ್ ಕಾಲೇಜ್ ಹಿಂಭಾಗ) ಅವರ ನಿವಾಸದಲ್ಲಿ ಇರಿಸಲಾಗುವುದು. ನಂತರ ಅಂತ್ಯಕ್ರಿಯೆಯನ್ನು ಮಧ್ಯಾಹ್ನ 3.30ಕ್ಕೆ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು : ಆರ್.ಎಸ್. ವಿಜಯಾನಂದ ಮತ್ತು ಸಹೋದರರು, ಶಿಲ್ಪಿ ಇಂಜಿನಿಯರಿಂಗ್ ಕನ್ಸಲ್ಟೆನ್ಸಿ

ಮೊ. : 98452 22114


# ಮಾನವ ಕುಲಕ್ಕೆ ಉದ್ದಾರದ ಮಾರ್ಗ ತೋರಿದ ಅಂಬಿಗರ ಚೌಡಯ್ಯ

**ಅಂಬಿಗರ ಚೌಡಯ್ಯ ಹಾಗೂ ವೇಮನ ಜಯಂತಿಯಲ್ಲಿ ಗಂಗಾಮತ ಸಮಾಜದ ಮುಖಂಡ ಹೇಮಣ್ಣ ಮೋರಿಗೆರೆ**



ಹರಪನಹಳ್ಳಿ, ಜ. 21 - ಅಂಬಿಗರ ಚೌಡಯ್ಯ ಸಮಾಜ ಸುಧಾರಣೆಗೆ ನೇರ ನಿಷ್ಠೂರ ವಚನ ರಚಿಸಿ, ಸಮಾಜ ತಿದ್ದುವ ಕೆಲಸ ಮಾಡಿದರೆಂದು ಗಂಗಾಮತ ಸಮಾಜದ ಮುಖಂಡ ಹೇಮಣ್ಣ ಮೋರಿಗೆರೆ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿ ರಾಜೀವ್ ಗಾಂಧಿ ಸಭಾಂಗಣದಲ್ಲಿ ತಾಲ್ಲೂಕು ಆಡಳಿತ ಏರ್ಪಡಿಸಿದ್ದ ಅಂಬಿಗರ ಚೌಡಯ್ಯ ಹಾಗೂ ವೇಮನ ಜಯಂತಿಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನಿಜಶರಣ ಚೌಡಯ್ಯ ಸರ್ವರ ಒಳಿತು ಬಯಸಿದ್ದರು, ಸಮಸ್ತ ಮಾನವ ಕುಲದ ಉದ್ದಾರದ ಮಾರ್ಗ ತೋರಿದರು, ಅನುಭವ ಮಂಟಪದಲ್ಲಿ ಚೌಡಯ್ಯ ಯಾವುದೇ ಜಾತಿ ಪರ ನಿಲ್ಲಲಿಲ್ಲ.

ವಚನಗಳ ಮೂಲಕ ಜಾತಿ ವ್ಯವಸ್ಥೆ, ಮೂಢ ನಂಬಿಕೆಯ ವಿರುದ್ದ ಜಾಗೃತಿ ಮೂಡಿಸಲು ಪ್ರಯತ್ನಿಸಿದರು, ವಚನ ಸಾಧನೆ ಮತ್ತು ವ್ಯಕ್ತಿತ್ವವು ಅಗಾಧ ಶಕ್ತಿಯುತವಾಗಿತ್ತು, ಅಂತಹ ಮಹಾನ್ ಶರಣರ ತತ್ವಗಳನ್ನು ಇಂದಿನ ಯುವ ಜನತೆ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಉತ್ತಮ ಸಮಾಜ ನಿರ್ಮಾಣ ಮಾಡಬೇಕು, ಅಂಬಿಗರ ಸಮಾಜವು 39 ಹೆಸರಿನಿಂದ ಕೂಡಿದ್ದು ಕೋಲಿ, ಕಬ್ಬಲಿಗ, ಮೊಗವೀರ, ಬಾರಿಕ, ಕಬ್ಬೇರ, ತಳವಾರ ಎನ್ನುವ ಹಲವಾರು ವಿಶಿಷ್ಠ ಉಪಜಾತಿಗಳಿಂದ ಕೂಡಿದ್ದು, ಜಿಲ್ಲಾವಾರು ಸಮಾಜದ ಹೆಸರು ಬದಲಾವಣೆಯಾಗಿವೆ.

ಈ ಸಮಾಜವು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ತುಳಿತಕ್ಕೆ ಒಳಗಾದ ಸಮಾಜವಾಗಿದೆ, ಅಂಬಿಗರ ಸಮಾಜವು ಮುಖ್ಯವಾಹಿನಿಗೆ ತರಲು ಜನಪ್ರತಿನಿಧಿಗಳು ಸಹಕರಿಸಬೇಕು, ಕೇವಲ ಚುನಾವಣೆಗಳಲ್ಲಿ ಮತವನ್ನು ಪಡೆಯುವ ವೇಳೆಯಲ್ಲಿ ಮಾತ್ರ ನಾವುಗಳು ದುರ್ಬಳಕೆ ಯಾಗುತ್ತಿದ್ದೇವೆ.

ಮಾತೆ ಮಾಣಿಕ್ಕೇಶ್ವರಿ, ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್, ಗಂಗೂಬಾಯಿ ಹಾನಗಲ್ ಇನ್ನು ಅನೇಕ ಮಹನೀಯರು ದೇಶದ ಅಭಿವೃದ್ದಿಯಲ್ಲಿ ತಮ್ಮದೇ ಪಾತ್ರ ನಿರ್ವಹಿಸಿದ್ದಾರೆ, ಅಂತಹ ಸಮಾಜವು ಹಲವಾರು ದಶಕಗಳಿಂದ ಎಸ್ಟಿ ಮೀಸಲಾತಿಯನ್ನು ಕೋರಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಧ್ವನಿ ಎತ್ತುವ ಕೆಲಸವಾಗಿದೆ.

ಆದರೆ ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆಯಿಂದ ಸಮಾಜದ ಮಕ್ಕಳಿಗೆ ಎಸ್ಟಿ ಮೀಸಲಾತಿಯಿಂದ ಸಿಗುವ ಸೌಲಭ್ಯಗಳು ಇಂದಿಗೂ ಮರೀಚಿಕೆಯಾಗಿವೆ, ಅತ್ಯಂತ ಪ್ರಾಮಾಣಿಕ, ಸ್ವಾಭಿಮಾನದಿಂದ ಜೀವಿಸುತ್ತಿರುವ ಅಂಬಿಗರ ಸಮಾಜಕ್ಕೆ ಎಸ್ಟಿ ಮೀಸಲಾತಿ ನೀಡಿ ಸರ್ಕಾರ ಸಹಕರಿಸಬೇಕು ಎಂದರು.


ಈ ವೇಳೆ ಗಂಗಾಮತ ಸಮಾಜದ ಮುಖಂಡರಾದ ಪವಾಡಿ ಮಲ್ಲಿಕಾರ್ಜುನ್, ಅರಸನಾಳು ಬಸವರಾಜ, ನಿವೃತ್ತ ಶಿಕ್ಷಕ ಶೇಖರಪ್ಪ, ಎ.ಎಂ. ಪದ್ಮಾವತಿ, ಸಿದ್ದಪ್ಪರೆಡ್ಡಿ, ನಾಗರಾಜ್ ಪಾಟೀಲ್ ರವರಿಗೆ ಗೌರವಿಸಿ, ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಬಿ.ವಿ. ಗಿರೀಶ್ ಬಾಬು, ಇ.ಓ. ಚಂದ್ರಶೇಖರ್, ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್. ಲೇಪಾಕ್ಷಪ್ಪ, ಕೃಷಿ ಸಹಾಯಕ ನಿರ್ದೇಶಕ ಉಮೇಶ್, ತಾಲ್ಲೂಕು ಗಂಗಾಮತ ಸಮಾಜದ ಉಪಾಧ್ಯಕ್ಷ ಜಾಲಗಾರ ಕೊಟ್ರೇಶ್, ಚಿಗಟೇರಿ ಹಾಲಮ್ಮ, ತಾಲ್ಲೂಕು ಕಾರ್ಯದರ್ಶಿ ಪವಾಡಿ ದೇವೇಂದ್ರಪ್ಪ, ಚಿಗಟೇರಿ ಸುರೇಶ್, ಬಾವಿಹಳ್ಳಿ ಚಂದ್ರಪ್ಪ ಹಾಗೂ ಇತರರಿದ್ದರು.

## ಹರಿಹರದಲ್ಲಿಂದು ವಿದ್ಯುತ್ ವ್ಯತ್ಯಯ

ಬಾಹರ ಮಕಾನ್, ಶೋಭಾ ಟಾಕೀಸ್ ರಸ್ತೆ, ಚರ್ಚ್ ರಸ್ತೆ, ಮುರ್ಕಲ್ ಕಾಂಪೌಂಡ್, ಜಯಶ್ರೀ ಟಾಕೀಸ್, ಪೋಸ್ಟ್ ಆಫೀಸ್, ನಗರಸಭೆ ಮಳಿಗೆಗಳು, ಉಡುಪಿ ಹೋಟೆಲ್, ಶುಭೋದಯ ಹಾಸ್ಪಿಟಲ್, ಸಿಬಾರ ರಸ್ತೆ, ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 3ರವರೆಗೂ ವಿದ್ಯುತ್ ಸರಬರಾಜು ವ್ಯತ್ಯಯವಾಗಲಿದೆ.


ಪ್ರಥಮ ಪುಣ್ಯಸ್ಮರಣೆ



ದಿ|| ಶ್ರೀಮತಿ ನಿರ್ಮಲಮ್ಮ ಬಸವನಕಟ್ಟಿಮಠ

ನಿಧನ : 22-01-2024

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿರುವ

ಬಿ.ಎಂ. ಹಾಲಸ್ವಾಮಿ ಮತ್ತು ಕುಟುಂಬದವರು

ಹಳೇ ಬೇತೂರು ರಸ್ತೆ, ದಾವಣಗೆರೆ.


## ಪೋಷಕರು ಶಿಕ್ಷಣದ ಜೊತೆಗೆ ಮಕ್ಕಳ ಆರೋಗ್ಯದ ಕಾಳಜಿ ವಹಿಸಿ

**ಓಂಕಾರ ಶ್ರೀ**




ದಾವಣಗೆರೆ,ಜ.21- ಹಿಂದಿನ ಕಾಲದಲ್ಲಿ ಆಸ್ಪತ್ರೆಗಳ ಸಂಖ್ಯೆ ಕಡಿಮೆ ಇತ್ತು. ಪ್ರತಿಯೊಬ್ಬರೂ ನೂರು ವರ್ಷಗಳ ತನಕ ಬಾಳುತ್ತಿದ್ದರು. ಇತ್ತೀಚೆಗೆ ಆಹಾರದ ಬಗ್ಗೆ ಕ್ರಮಬದ್ಧತೆ ಇಲ್ಲದಿರುವುದರಿಂದ ಮನುಷ್ಯನ ಆಯಸ್ಸು ಕೂಡ ಕಡಿಮೆಯಾಗಿದೆ. ಆದ್ದರಿಂದ ಪ್ರತಿಯೊಬ್ಬ ಪೋಷಕರು ಶಿಕ್ಷಣಕ್ಕೆ ಕೊಡುವ ಮಹತ್ವದ ಜೊತೆಗೆ ಪೌಷ್ಠಿಕಾಂಶದ ಆಹಾರವನ್ನು ಮಕ್ಕಳಿಗೆ ನೀಡಬೇಕು. ಹಾಗಾದಾಗ ಮಗು ಆರೋಗ್ಯವಾಗಿರುತ್ತದೆ. ಇದರಿಂದ ವಿದ್ಯಾಭ್ಯಾಸಕ್ಕೂ ಅನುಕೂಲವಾಗುತ್ತದೆ ಎಂದು ಆವರಗೊಳ್ಳ ಪುರವರ್ಗ ಹಿರೇಮಠದ ಓಂಕಾರ ಶಿವಾಚಾರ್ಯ ಶ್ರೀಗಳು ಹೇಳಿದರು.

ನಗರದ ಎ.ಸಿ.ಎಂ. ಶಾಲೆಯ 19ನೇ ವರ್ಷದ ವಾರ್ಷಿಕೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸಹಾಯಕ ಪ್ರಾಧ್ಯಾಪಕ ಎನ್. ಮಲ್ಲಯ್ಯ ಮಾತನಾಡಿ, ಮಕ್ಕಳಿಗೆ ಶಿಕ್ಷಣ ನೀಡುವ ಜೊತೆಗೆ ಪೋಷಕರಿಗೂ ಶಿಕ್ಷಣ ನೀಡುವ ಅವಶ್ಯಕತೆ ಇದೆ. ಮಕ್ಕಳಿಗೆ ಅಜ್ಜ-ಅಜ್ಜಿ, ಅಕ್ಕ-ತಮ್ಮ ಬಂಧುಗಳ ಸಂಬಂಧದ ಮಹತ್ವ ತಿಳಿಸಬೇಕು. ಸಂಸ್ಕಾರದ ಬೋಧನೆ ಮಾಡಬೇಕೆಂದರು. ತ್ಯಾವಣಗಿ ವೀರಭದ್ರಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಕಾರ್ಯದರ್ಶಿ ಮಂಜುನಾಥಸ್ವಾಮಿ, ಎಸ್.ಎಂ. ಮುರುಗೇಶ್ ಉಪಸ್ಥಿತರಿದ್ದರು. ಪ್ರೌಢಶಾಲಾ ಮಕ್ಕಳು ಪ್ರಾರ್ಥಿಸಿದರು. ಸಂಸ್ಥೆಯ ಟ್ರಸ್ಟಿ ಶ್ರುತಿ ವಾರ್ಷಿಕ ವಾಚನ ಮಾಡಿದರು. ಪ್ರೌಢಶಾಲಾ ಮುಖ್ಯಶಿಕ್ಷಕ ಪ್ರಕಾಶ್ ಸ್ವಾಗತಿಸಿದರು. ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯಿನಿ ಪುಷ್ಪಲತಾ ನಿರೂಪಿಸಿದರು. ಪದ್ಮಶ್ರೀ ವಂದಿಸಿದರು.


ಜಿ.ಟಿ. ಕಟ್ಟೆ ಗ್ರಾಮದ ಹರಲೀಪುರದ ಸಿದ್ದಪ್ಪ ನಿಧನ



ಹರಿಹರ ತಾ|| ಜಿ.ಟಿ. ಕಟ್ಟೆ ಗ್ರಾಮದ ಕಾಂಗ್ರೆಸ್ ಮುಖಂಡರು, ಗ್ರಾ.ಪಂ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದ್ಯಸರೂ ಆದ ಹೆಚ್. ಬೀರಪ್ಪನವರ ತಂದೆಯವರಾದ

ಶ್ರೀ ಹರಲೀಪುರ ಸಿದ್ದಪ್ಪ

(90 ವರ್ಷ) ಅವರು ದಿನಾಂಕ : 21.01.2025ರ ಮಂಗಳವಾರ ಮಧ್ಯಾಹ್ನ 3.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಐವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 22.01.2025ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಜಿ.ಟಿ. ಕಟ್ಟೆ ಗ್ರಾಮದಲ್ಲಿ ನೆರವೇರಲಿದೆ.

ದುಃಖತಪ್ತರು : ಹೆಚ್. ರಾಜಪ್ಪ ಮತ್ತು ಹೆಚ್. ಬೀರಪ್ಪ ಹಾಗೂ ಕುಟುಂಬದವರು, ಜಿ.ಟಿ. ಕಟ್ಟೆ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು


## ಅದಾನಿ ಎನರ್ಜಿಗೆ 25 ಸಾವಿರ ಕೋಟಿ ರೂ. ಯೋಜನೆ

ಅಹಮದಾಬಾದ್, ಜ.21- ಅದಾನಿ ಎನರ್ಜಿ ಸಲ್ಯೂಷನ್ಸ್ ಲಿಮಿಟೆಡ್ ಕಂಪನಿಗೆ 25 ಸಾವಿರ ಕೋಟಿ ರೂ.ಗಳ ಯೋಜನೆ ದೊರೆತಿದೆ. ಅದಾನಿ ಎನರ್ಜಿ ದೇಶದ ಅತಿ ದೊಡ್ಡ ಖಾಸಗಿ ವಿದ್ಯುತ್ ವಿತರಣೆ ಹಾಗೂ ಪೂರೈಕೆ ಕಂಪನಿಯಾಗಿದೆ. ರಾಜಸ್ಥಾನದ ಬದ್ಲಾದಿಂದ ಉತ್ತರ ಪ್ರದೇಶದ ಫತೇಪುರಿಗೆ ವಿದ್ಯುತ್ ವ್ಯವಸ್ಥೆಯನ್ನು ಸಂಪರ್ಕಿಸುವ ಬೃಹತ್ ಯೋಜನೆ ಇದಾಗಿದೆ.


ದೇಹದಾನಿ ಹೆಮ್ಮನಬೇತೂರು ರೇವಣಸಿದ್ದಯ್ಯ ನಿಧನ



ದಾವಣಗೆರೆ ಸಿಟಿ ತರಳಬಾಳು ಬಡಾವಣೆ, ಡೋರ್ ನಂ. 3682/ಎ3 'ಶಂಕರ ಸದನ' ವಾಸಿ

ಹೆಮ್ಮನಬೇತೂರು ಬೆಣ್ಣೆಹಳ್ಳಿ ಮಠದ ರೇವಣಸಿದ್ದಯ್ಯ ಬಿ.ಎಂ.

ಇವರು ದಿನಾಂಕ 21.01.2025ರ ಮಂಗಳವಾರ ಬೆಳಗಿನ ಜಾವ 2.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 84 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ 21.01.2025ರ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಎಸ್‌ಎಸ್‌ಐಎಂಎಸ್‌ಆರ್‌ಗೆ ದೇಹದಾನ ಮಾಡಲಾಯಿತು.

**ವಿ.ಸೂ. ದಿನಾಂಕ 23.01.2025ರ ಗುರುವಾರ** ನಿಗದಿಯಾಗಿದ್ದ **ಕೈಲಾಸ ಶಿವಗಣಾರಾಧನೆ**ಯನ್ನು ಅನಿವಾರ್ಯ ಕಾರಣಗಳಿಂದ **25.01.2025ರ ಶನಿವಾರಕ್ಕೆ ಮುಂದೂಡಲಾಗಿದೆ. ಶನಿವಾರ ಮಧ್ಯಾಹ್ನ 12 ಗಂಟೆಗೆ ಶ್ರೀ ಚೌಡೇಶ್ವರಿ ಸಮುದಾಯ ಭವನ, ಐಟಿಐ ಕಾಲೇಜು ಆವರಣ,** ದಾವಣಗೆರೆಯಲ್ಲಿ ನೆರವೇರಿಸಲಾಗುವುದು.

**ಪೂರ್ಣಿಮಾ : 94839 90149, ರಮೇಶ್ : 98445 83471**



ಶ್ರೀಮತಿ ಪದ್ದಮ್ಮ ನಿಧನ



ದಾವಣಗೆರೆ ಬಂಬೂಬಜಾರ್ ನಿವಾಸಿ

ಶ್ರೀಮತಿ ಪದ್ದಮ್ಮ

(ದಿ. ಜಕ್ಕಾ ನಾರಾಯಣಪ್ಪನವರ ಧರ್ಮಪತ್ನಿ)

ಇವರು ದಿನಾಂಕ 21.01.2024ರ ಮಂಗಳವಾರ ವಯೋ ಸಹಜದಿಂದ ಬೆಳಗ್ಗೆ 8:10 ಕ್ಕೆ ನಿಧನರಾದರರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 90 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 21.01.2025ರ ಮಂಗಳವಾರ ಸಂಜೆ 5.30ಕ್ಕೆ ಬೂದಾಳ್ ರಸ್ತೆಯ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬವರ್ಗದವರು.


## ಹರಿಹರದಲ್ಲಿ ನಾಳೆ ಬಿಸಿಯೂಟ ತಯಾರಕರಿಂದ ಪ್ರತಿಭಟನೆ

ದಾವಣಗೆರೆ, ಜ. 21- ಹರಿಹರದಲ್ಲಿ ಅಕ್ಷರ ದಾಸೋಹ ಬಿಸಿಯೂಟ ತಯಾರಕರು ನಾಡಿದ್ದು ದಿನಾಂಕ 23ರ ಗುರುವಾರ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಲಿದ್ದಾರೆ ಎಂದು ಬಿಸಿ ಊಟ ತಯಾರಕರ ಫೆಡರೇಶನ್‌ನ ಜಿಲ್ಲಾಧ್ಯಕ್ಷ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ.

ಶಾಲೆಯಲ್ಲಿ ಅಡುಗೆ ಕೆಲಸ ಮುಗಿಸಿ ಗುರುವಾರ ಮಧ್ಯಾಹ್ನ 2 ಗಂಟೆಗೆ ಹರಿಹರ ತಾಲ್ಲೂಕು ಕಚೇರಿ ಬಳಿ ಬಿಸಿಯೂಟ ತಯಾರಕರು ಜಮಾಗೊಂಡು ಪ್ರತಿಭಟನೆ ನಡೆಸಿ ಬರುವ ಬಜೆಟ್‌ನಲ್ಲಿ ತಮಗೆ ವೇತನ ಹೆಚ್ಚಿಸಬೇಕು ಹಾಗೂ ಮತ್ತಿತರೆ ಬೇಡಿಕೆಗಳನ್ನು ಈಡೇರಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿ ತಹಶೀಲ್ದಾರ್ ರವರಿಗೆ ಮನವಿ ಸಲ್ಲಿಸುವರು.

ಹರಿಹರ ತಾಲ್ಲೂಕಿನ ಎಲ್ಲಾ ಬಿಸಿಯೂಟ ತಯಾರಕರು ಮಧ್ಯಾಹ್ನ 2 ಗಂಟೆಗೆ ಹರಿಹರದ ತಾಲ್ಲೂಕು ಕಚೇರಿ ಬಳಿ ಆಗಮಿಸಬೇಕೆಂದು ಸಂಘಟನೆ ಮುಖಂಡರುಗಳಾದ ಹನಗವಾಡಿ ಸುಧಾ, ಗುತ್ತೂರು ಮಂಗಳಾ, ಹೊಳೆಸಿರಿಗೆರೆ ವಿನೋದಮ್ಮ, ಗಾಂಧಿ ಮೈದಾನ ಶಾಲೆ ನಾಗಮ್ಮ, ಕಡ್ಲೇಗೊಂದಿ ಸರೋಜ, ಮಲೇಬೆನ್ನೂರು ಪ್ರೇಮ ತಿಳಿಸಿದ್ದಾರೆ.

## ನಗರದಲ್ಲಿಂದು ಸಂದಲ್, ನಾಳೆ ಉರುಸ್

ದಾವಣಗೆರೆ, ಜ.21- ಹೊಂಡದ ಸರ್ಕಲ್ ಸುಲ್ತಾನ್ ಪೇಟೆಯಲ್ಲಿರುವ ಹಜರತ್ ಸೈಯದ್ ರತನ್ ಷಾವಲಿ ಚಿಸ್ತಿ (ರತನ್ ಬುಡನ್ ಬಾದೇಷಾ ರ.ಅ) ಅವರ ಉರುಸ್ ನಾಡಿದ್ದು ದಿನಾಂಕ 23ರ ಗುರುವಾರ ಜರುಗಲಿದೆ.

ನಾಳೆ ಬುಧವಾರ ಮಧ್ಯಾಹ್ನ 3 ಗಂಟೆಗೆ ಡಿ. ಮಾಲತೇಶ್ ಫೈಲ್ವಾನ್ ಅವರ ಮನೆಯಿಂದ ಗಂಧ ಪಡೆದು, ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಫಕೀರ್ ಸ್ವಾಮಿಗಳ ಜರಬ್ ನೊಂದಿಗೆ ಸಾಯಂಕಾಲ ದರ್ಗಾ ತಲುಪಿ ಗಲೀಫ್ ಚಾದರ್ ಅರ್ಪಿಸುವ ಮೂಲಕ ಸಂದಲ್ ಆಚರಿಸಲಾಗುವುದು.

ನಾಡಿದ್ದು ದಿನಾಂಕ 23 ರ ಗುರುವಾರ ಉರುಸ್ ದರ್ಗಾದಲ್ಲಿ ಫಾತೇಹಾ ಖ್ವಾನಿ ಜರುಗಲಿದೆ. ಅತಿಥಿಗಳಿಗೆ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ.

ದಿನಾಂಕ 24 ರಂದು ಸಾರ್ವಜನಿಕ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ತೌಫೀಕ್ ಆಹಮ್ಮದ್ ತಿಳಿಸಿದ್ದಾರೆ.

## ಬೈಕ್ ಅಪಘಾತ: ಅಪರಿಚಿತ ಶವ ಪತ್ತೆ

ಹರಿಹರ, ಜ.21- ತಾಲ್ಲೂಕಿನ ಮಿಟ್ಲಕಟ್ಟೆ-ದೇವರಬೆಳಕೆರೆ ರಸ್ತೆಯಲ್ಲಿ ಬೈಕ್ ಅಪಘಾತವಾಗಿ ಅಪರಿಚಿತ ವ್ಯಕ್ತಿ (73) ಮೃತಪಟ್ಟಿದ್ದು, ವಾರಸುದಾರರ ಪತ್ತೆಗೆ ಪೊಲೀಸರು ಮನವಿ ಮಾಡಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗೋಧಿ ಮೈ ಬಣ್ಣ, ಸಾಧಾರಣ ಮೈಕಟ್ಟು, ಕೋಲು ಮುಖ, ಬಿಳಿ ಶರ್ಟ್, ಬಿಳಿ ಬನಿಯನ್ ಹಾಗೂ ಬಿಳಿ ಪಂಚೆ ಧರಿಸಿದ್ದಾರೆ. ಅಪರಿಚಿತ ಬಗ್ಗೆ ಮಾಹಿತಿ ಸಿಕ್ಕಲ್ಲಿ 08192-272018, 9480803234 ಹಾಗೂ 9480803222 ಈ ಸಂಖ್ಯೆಗೆ ಸಂಪರ್ಕಿಸಬಹುದು.


ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಗಾಂಧಿ ಭಾರತ
ಬೆಳಕಿನೆಡೆಗೆ...
ಗಾಂಧೀಜಿ ಕನಸು
ಕರ್ನಾಟಕದಲ್ಲಿ ನನಸು
ಗೃಹ ಜ್ಯೋತಿ
ಪ್ರತಿ ಮನೆಗೆ
200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಫಲಾನುಭವಿಗಳ ಸಂಖ್ಯೆ: 1.62 ಕೋಟಿ
ಒಟ್ಟು ವೆಚ್ಚ: ರೂ.11,810 ಕೋಟಿ
* ನವೆಂಬರ್ 2024ಕ್ಕೆ
ನುಡಿದಂತೆ ನಡೆದಿದ್ದೇವೆ...
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ
ಬಡವರಿಗೆ ಪ್ರತಿ ತಿಂಗಳು 10 kg
5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170
ಗೃಹಲಕ್ಷ್ಮಿ
ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು
₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 ಪದವೀಧರರಿಗೆ
₹1500 ಡಿಪ್ಲೋಮಾ ಪದವೀಧರರಿಗೆ
ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು
"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್‌ನಲ್ಲಿ 40x45 East, 40 ಅಡಿ ರೋಡಿಗಿದೆ. 30x40 North ವಿನಾಯಕ ಬಡಾವಣೆ ಕ್ಲಬ್ ಹತ್ತಿರ.
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

**ಸೈಟು ಮಾರಾಟಕ್ಕಿದೆ**
ಜಿ.ಎಂ.ಐ.ಟಿ. ಕಾಲೇಜು ಹಿಂಭಾಗ 30x40 ಅಳತೆಯ ಸೈಟು ಮಾರಾಟಕ್ಕಿದೆ.
**ಮೊ: 98443 95959**

**ಬೇಕಾಗಿದ್ದಾರೆ**
ಗಿಫ್ಟ್ ಶಾಪ್‌ನಲ್ಲಿ ಕೆಲಸ ಮಾಡಲು ಪಿಯುಸಿ ಆಗಿರುವ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
**ಆರ್ಚೀಸ್ ಗ್ಯಾಲರಿ**
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
**ಮೊ : 96324-33166**

**ಸೈಟುಗಳು ಮಾರಾಟಕ್ಕಿವೆ**
SSM ಎನ್ ಕ್ಲೇವ್‌ನಲ್ಲಿ ಗ್ಲಾಸ್ ಹೌಸ್ ಹತ್ತಿರ 45x40 East, 30x40 East, 30x50, 30x50 South ಅಕ್ಕ-ಪಕ್ಕ, 30x55, 30x55 East ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ) ದಾವಣಗೆರೆ.
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
www.hindusmatrimony.com
15-01-2025 ರಿಂದ 31-01-2025
ಎಲ್ಲಾ ಹಿಂದೂ ವಧುಗಳಿಗೆ
* (Free Registration)
80509 52637, 9380213677

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
**97315 12365**

**ಮನೆಯ ರೀ ಪೇಂಟಿಂಗ್**
ಮನೆಯ ಒಳಗಡೆ ಮತ್ತು ಹೊರಗಡೆ ಕಡಿಮೆ ಖರ್ಚಿನಲ್ಲಿ ಅಂದವಾಗಿ ಪೇಂಟ್ ಮಾಡಿ ಕೊಡಲಾಗುವುದು.
**96065 57066**

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**80739 48857**

**ಬೇಕಾಗಿದ್ದಾರೆ**
ಅಶೋಕ್ ಲೇಲ್ಯಾಂಡ್ ಓಡಿಸಬಲ್ಲ ಬ್ಯಾಡ್ಜ್ ವುಳ್ಳ ಡ್ರೈವರ್ ಹಾಗೂ ಎಸ್ ಎಸ್.ಎಲ್ ಸಿ ಪಾಸ್/ ಫೇಲಾಗಿರುವವರು ಸೇಲ್ಸ್ ಮನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು.
ಸಂಪರ್ಕಿಸಿ : **ಮಣಿಕಂಠ ಏಜೆನ್ಸೀಸ್**, ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
**94482 33326, 78991 35660**

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟ್ಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
**94484 39639**

**ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ**
ವಿದ್ಯಾರ್ಹತೆ : ಡಿಗ್ರಿ
ವಿದ್ಯಾರ್ಥಿ ಭವನ್, ದಾವಣಗೆರೆ
**98861 09946**

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
**96860 22969**

**ಬೇಕಾಗಿದ್ದಾರೆ**
ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗೆ ಪೋಷಕರಿಗೆ/ ವಿದ್ಯಾರ್ಥಿಗಳಿಗೆ ಶಾಲೆಯ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲು ಯುವಕ/ ಯುವತಿಯರು ಬೇಕಾಗಿದ್ದಾರೆ.
**97315 55751**
73386 04513, 73386 04512

**Pzza pizza**
Lady owner
Female staff required for cloud kitchen.
**83102 00810**
**79758 08524**

**ಮನೆ ಬಾಡಿಗೆಗೆ ಇದೆ**
ಹೊಸ ಕೋರ್ಟ್ ಹಿಂಭಾಗ ಎ ಬ್ಲಾಕ್ 5ನೇ ಕ್ರಾಸ್ ಪಾರ್ಕ್ ಬಳಿ #21, 2ನೇ ಮಹಡಿ ಅಲ್ಲಿ 2 ಮನೆಗಳು ಬಾಡಿಗೆಗೆ ಇವೆ. ವಿಚಾರಿಸಿ
9901247050, 7204022829

**TUITIONS**
CBSE / ICSE Boards
Class 8th, 9th, 10th
**CRASH COURSES FOR**
NEET / CET / IIT - JEE
PUC I / PUC II / PCMB
*NEET Long Term / Supplementary Exams*
**97398 65711, 94822 44114**

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
ಸಂಪರ್ಕಿಸಿ :
**81056 99985**
**89715 04492**

**ಕೆಲಸಗಾರರು ಬೇಕಾಗಿದ್ದಾರೆ**
ಹೋಟೆಲ್ ಉದ್ಯಮಕ್ಕೆ ಕೆಲಸಗಾರರು ಬೇಕಾಗಿದ್ದಾರೆ.
**70190 51306**

**ಬೇಕಾಗಿದ್ದಾರೆ**
ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗೆ ಪೋಷಕರಿಗೆ/ ವಿದ್ಯಾರ್ಥಿಗಳಿಗೆ ಶಾಲೆಯ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲು ಯುವಕ/ ಯುವತಿಯರು ಬೇಕಾಗಿದ್ದಾರೆ.
**84960 24363**
73386 04513, 73386 04512

**ಮೊರಾರ್ಜಿ ಶಾಲೆಗಳಿಗೆ ತರಬೇತಿ**
ಮೊರಾರ್ಜಿ ಶಾಲೆಗಳಿಗೆ ಇದೇ ಶುಕ್ರವಾರ (24.01.2025) ರಿಂದ ಪ್ರತಿ ದಿನ ಸಂಜೆ 6 ರಿಂದ 9 ರವರೆಗೆ ತರಬೇತಿ ಇರುತ್ತದೆ. ಇದಲ್ಲದೆ ನಮ್ಮಲ್ಲಿ ಇದ್ದು ಈ ಮೇಲಿನ ಶಾಲೆಗಳಿಗೆ ಓದಲು ಹಾಸ್ಟೆಲ್‌ನ ವ್ಯವಸ್ಥೆ ಸಹ ಇರುತ್ತದೆ. ತರಬೇತಿ ನೀಡುವವರು ಶ್ರೀ ಸುರೇಶ್ ಪಿ. ಮುರುಗಿ. (M.sc, B.Ed)
99028 24909, 98447 48763

**ಬೇಕಾಗಿದ್ದಾರೆ**
ದಾವಣಗೆರೆ ಹೊಸ ಬಸ್ ನಿಲ್ದಾಣ ಹಿಂಭಾಗದಲ್ಲಿರುವ ಪ್ರತಿಷ್ಠಿತ ಬಾರ್ & ರೆಸ್ಟೋರೆಂಟ್‌ನಲ್ಲಿ ವೆಂಡರ್ ಕೆಲಸಕ್ಕಾಗಿ ಉತ್ಸಾಹಿ ಯುವಕರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಊಟ, ವಸತಿ, ಉಚಿತವಾಗಿ ನೀಡಲಾಗುವುದು. ಆಸಕ್ತರು ಸಂಪರ್ಕಿಸಿ.
**ಸಂತೋಷ, ಮಾಲೀಕರು.**
**98442 99666**

**CHANGE OF NAME**
I **NANCY SOWMYA MALIN (NANCY SOWMYA),** previously called **NANCY SOWMYA MALIN (NANCY SOWMYA)** resident of Ashok Nagar, Davangere - 577 001 have changed my name as **NANCY SOWMYA MALIN** vide affidavit date 21.01.2025 sworn before Notary M. Prathaparudra Davangere. Henceforth all my transactions and dealings will be in my new name **NANCY SOWMYA MALIN**
S/d- **NANCY SOWMYA MALIN**

**Avoid Mosquiteos**
Mosquito Nets for doors & windows
**Sri Gowri Enterprises**
#7C2, 4th cross Near Shaneshwara Temple Karur Industrial Area, P.B Road, Davanagere -577006
**72049 94628**

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾ ದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
**ಶ್ರೀ ಗುರು ಎಂಟರ್ ಪ್ರೈಸಸ್**
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


# ಅಚ್ಚುಕಟ್ಟಿನ ಕೊನೆ ಭಾಗಕ್ಕೆ ಇನ್ನೂ ತಲುಪದ ನೀರು

ಮಲೇಬೆನ್ನೂರು, ಜ.21- ಭದ್ರಾ ಜಲಾಶಯದಿಂದ ನಾಲೆಗಳಿಗೆ ನೀರು ಬಿಡುಗಡೆ ಮಾಡಿ 12 ದಿನ ಕಳೆದಿದ್ದರೂ ಅಚ್ಚುಕಟ್ಟು ಪ್ರದೇಶದ ಕೊನೆ ಭಾಗದ ಕಾಲುವೆಗಳಿಗೆ ಇನ್ನೂ ನೀರು ತಲುಪಿಲ್ಲ ಎಂದು ಭಾನುವಳ್ಳಿ, ಹೊಳೆಸಿರಿಗೆರೆ, ಕೆ.ಎನ್. ಹಳ್ಳಿ, ಪಾಳ್ಯ, ಕೊಕ್ಕನೂರು, ಕಮಲಾಪುರ, ಯಲವಟ್ಟಿ ಗ್ರಾಮಗಳ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾಲುವೆಯಲ್ಲಿ ನೀರು ಬಂದ ನಂತರ ನಾವು ಭತ್ತದ ಬೀಜ ಚೆಲ್ಲಿ ಸಸಿ ಮಡಿ ಬೆಳೆಸಿಕೊಳ್ಳ ಬೇಕಾಗಿರುತ್ತದೆ. ಆದರೆ, ಇದುವರೆಗೂ ಕಾಲುವೆಯಲ್ಲಿ ನೀರು ಬಂದಿಲ್ಲ. ನಾವು ಯಾವಾಗ ಬೀಜ ಚೆಲ್ಲಿ, ಯಾವಾಗ ನಾಟಿ ಮಾಡಬೇಕೆಂದು ರೈತರು ಪ್ರಶ್ನೆ ಮಾಡಿದ್ದಾರೆ.

ನೀರಿನ ನಿರ್ವಹಣೆ ಮಾಡಬೇಕಾದ ಇಂಜಿನಿಯರ್‌ಗಳು ಮತ್ತು ಸೌಡಿಗಳು ಇದುವರೆಗೂ ನಮ್ಮ ಭಾಗಕ್ಕೆ ಭೇಟಿ ನೀಡಿಲ್ಲ. ಈ ಬಗ್ಗೆ ಜನಪ್ರತಿನಿಧಿಗಳಾಗಲೀ ಅಥವಾ ಅಧಿಕಾರಿಗಳಾಗಲೀ ಗಮನ ಹರಿಸಿಲ್ಲ ಎಂದು ರೈತರು ಬೇಸರ ವ್ಯಕ್ತಪಡಿಸಿದರು.

ಭದ್ರಾ ಜಲಾಶಯದಿಂದ ಜನವರಿ 8 ರಿಂದ ನಾಲೆಗಳಿಗೆ ನೀರು ಹರಿಸಲಾಗುತ್ತಿದೆ. ಆದರೆ ಮಲೇಬೆನ್ನೂರು ಭದ್ರಾ ನಾಲಾ ನಂ. 3 ಉಪವಿಭಾಗ ವ್ಯಾಪ್ತಿಯ ಕೊಕ್ಕನೂರು, ಕಡರನಾಯ್ಕನಹಳ್ಳಿ, ಹೊಳೆ ಸಿರಿಗೆರೆ, ಕಮಲಾಪುರ ಮತ್ತಿತರೆ ಗ್ರಾಮಗಳ ಕಾಲುವೆಗಳಿಗೆ ಇದುವರೆಗೂ ಹನಿ ನೀರೂ ಸಹ



ಕೆ.ಎನ್.ಹಳ್ಳಿ ಬಳಿ ನೀರಿಲ್ಲದೆ ಒಣಗಿರುವ ಭದ್ರಾ ಕಾಲುವೆ

ಹರಿದು ಬಂದಿಲ್ಲ. ಕಾಲುವೆಗಳು ಹೂಳು ತುಂಬಿ ಕೊಂಡಿವೆ. ತೋಟಗಳಿಗೂ ನೀರಿನ ಅವಶ್ಯಕತೆ ಇದೆ.

**ರೈತರ ಆಕ್ರೋಶ**

ಭತ್ತದ ಸಸಿಗಳನ್ನು ಬೆಳೆಸಿ ನಾಟಿ ಮಾಡಲು ಒಂದು ತಿಂಗಳು ಕಾಲಾವಕಾಶ ಬೇಕಾಗುತ್ತದೆ. ವಿಳಂಬವಾದರೆ ಇಳುವರಿ ಕುಂಠಿತವಾಗುತ್ತದೆ ಎಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ.

ಜಿಲ್ಲಾಡಳಿತ ಕೂಡಲೇ ನಮ್ಮ ಸಮಸ್ಯೆ ಕಡೆ ಗಮನ ಹರಿಸಬೇಕೆಂದು ಆಗ್ರಹಿಸಿರುವ ರೈತ ಸಂಘದ ಸಿರಿಗೆರೆ ಪಾಲಾಕ್ಷಪ್ಪ, ಕೆ.ಎನ್. ಹಳ್ಳಿ ಪ್ರಭುಗೌಡ, ಭಾನುವಳ್ಳಿ ಧನ್ಯಕುಮಾರ್ ಮತ್ತಿತ ರರು, ಕಂಡೂ ಕಾಣದ ರೀತಿಯಲ್ಲಿ ಅಧಿಕಾರಿಗಳು ಕುಳಿತುಕೊಂಡಿರುವುದು ವಿಪರ್ಯಾಸ ಎಂದಿದ್ದಾರೆ.

ಅಚ್ಚುಕಟ್ಟು ಪ್ರದೇಶದ ಕೊನೆ ಭಾಗಕ್ಕೆ ನೀರು ತಲುಪಬೇಕಾದರೆ ಕೊಮಾರನಹಳ್ಳಿ ಬಳಿ ನಾಲ್ಕು ಅಡಿ ನೀರು ಹರಿಯಬೇಕು. ಆದರೆ ಈಗ ಎರಡರಿಂದ ಮೂರು ಅಡಿ ಮಾತ್ರ ನೀರು ಹರಿಯುತ್ತಿದೆ, ಮೇಲ್ಭಾಗದಿಂದ ನಾಲೆಯಲ್ಲಿ ನೀರಿನ ಹರಿವನ್ನು ಹೆಚ್ಚಿಸಿಕೊಂಡು ಕೆಳಭಾಗಕ್ಕೆ ತರಬೇಕೆಂದು ರೈತರು ಒತ್ತಾಯಿಸಿದ್ದಾರೆ. ಕೂಡಲೇ ವೇಳಾಪಟ್ಟಿ ರಚಿಸಿ ಆಯಾ ದಿನಗಳಲ್ಲಿ ನಿಗದಿತ ಪ್ರಮಾಣದಲ್ಲಿ ನೀರು ಹರಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮಲೇಬೆನ್ನೂರು ನೀರಾವರಿ ಇಲಾಖೆಯ ಎಇಇ ಕೃಷ್ಣಮೂರ್ತಿ ತಿಳಿಸಿದ್ದಾರೆ.

# ಸಿದ್ಧಗಂಗಾ ಶ್ರೀ ರಾಷ್ಟ್ರಸಂತ ಎಂದು ಘೋಷಿಸಿ : ಜಯಮೃತ್ಯುಂಜಯ ಶ್ರೀ

**(1ನೇ ಪುಟದಿಂದ)** ಶಿವಕುಮಾರ ಶ್ರೀಗಳಿಗೆ 'ಭಾರತ ರತ್ನ' ಘೋಷಿಸುವಲ್ಲಿ ಕೇಂದ್ರ ಸರ್ಕಾರ ಮೀನಾಮೇಷ ಎಣಿಸುತ್ತಿದೆ. ಗಣರಾಜ್ಯೋತ್ಸವದೊಳಗೆ ಪ್ರಶಸ್ತಿಯನ್ನು ಘೋಷಿಸಬೇಕೆಂದು ಆಗ್ರಹಿಸಿದರು.

ಯಾವುದೇ ಜಾತಿ, ಮತ, ಪಂಥಗಳ ಭೇದವಿಲ್ಲದೇ ಜಾತ್ಯತೀತವಾಗಿ ಸರ್ವರಿಗೂ ಸಮನಾಗಿ ಅನ್ನ, ಅಕ್ಷರ, ಆಶ್ರಯದ ಜೊತೆಗೆ ಜ್ಞಾನ ದಾಸೋಹ ನೀಡಿದ ಮಹಾತ್ಮ ಸಿದ್ಧಗಂಗಾ ಶ್ರೀಗಳು. ಅಪ್ಪಟ ಬಸವ ತತ್ವದ ಅನುಯಾಯಿಯಾಗಿದ್ದ ಶ್ರೀಗಳು ಕಾಯಕ, ದಾಸೋಹ ಮತ್ತು ಸಮಾನತೆಯ ಮಂತ್ರವನ್ನು ನೀಡಿದವರು. ಇಂತಹ ಮಹಾಪುರುಷರಿಗೆ 'ಭಾರತ ರತ್ನ' ಪ್ರಶಸ್ತಿ ನೀಡಿದರೆ ಭಾರತದ ಸಂಸ್ಕೃತಿಯನ್ನು ಮತ್ತು ಜಾತ್ಯತೀತ ಮಠವನ್ನು ಗೌರವಿಸಿದಂತಾಗುತ್ತದೆ ಎಂದರು.

ದಾವಣಗೆರೆ ಕೊಂಡಜ್ಜಿ ರಸ್ತೆಯ ವೃತ್ತವೊಂದಕ್ಕೆ ಡಾ. ಶಿವಕುಮಾರ ಸ್ವಾಮೀಜಿ ವೃತ್ತ ಎಂದು ನಾಮಕರಣ ಮಾಡುವ ಜೊತೆಗೆ ಅವರ ಪುತ್ಥಳಿ ಅನಾವರಣಗೊಳಿಸುವ ಕಾರ್ಯ ಶ್ಲಾಘನೀಯವಾದುದು. ಈವರೆಗೆ ಆರ್‌ಟಿಓ ಸರ್ಕಲ್ ಎಂದೇ ಕರೆಯಲ್ಪಡುತ್ತಿದ್ದ ಸರ್ಕಲ್ ಅನ್ನು ಇನ್ನುಮುಂದೆ ಸಿದ್ಧಗಂಗಾ ಡಾ. ಶಿವಕುಮಾರ ಮಹಾಸ್ವಾಮಿ ವೃತ್ತ ಎಂದೇ ಕರೆಯಬೇಕು. ಯುವ ಮುಖಂಡ ಶಂಕರ್ ಶಿರೇಕರ್ ಪವಾರ್ ಮತ್ತವರ ತಂಡ ಪುತ್ಥಳಿ ಸ್ಥಾಪಿಸಿರುವುದು ಸಂತಸದ ವಿಚಾರ.ಆದಷ್ಟೂ ಬೇಗ ಕಂಚಿನ ಪುತ್ಥಳಿ ಸ್ಥಾಪಿಸುವ ಅವರ ಆಶಯ ಈಡೇರಲಿ ಎಂದು ಆಶಿಸಿದರು.

ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ ತ್ರಿವಿಧ ದಾಸೋಹಿ, ನಡೆದಾಡುವ ದೇವರೆಂದೇ ಖ್ಯಾತಿ ಗಳಿಸಿದ್ದ ಸಿದ್ಧಗಂಗಾ ಜಗದ್ಗುರು ಡಾ. ಶಿವಕುಮಾರ ಮಹಾಸ್ವಾಮೀಜಿಯವರು ಕೋಟ್ಯಂತರ ವಿದ್ಯಾರ್ಥಿಗಳಿಗೆ ಅನ್ನ, ಅಕ್ಷರ ನೀಡಿದ ಮಹಾಪುರುಷರು ಎಂದು ಬಣ್ಣಿಸಿದರು.

ಸಿದ್ಧಗಂಗಾ ಮಠದ ದಾಸೋಹಕ್ಕೆ ನಾಡಿನ ಭಕ್ತರು ಸ್ವಯಂಪ್ರೇರಿತರಾಗಿ ದವಸ-ಧಾನ್ಯಗಳನ್ನು ನೀಡುತ್ತಾ ಬಂದಿದ್ದಾರೆ. ಅಂದು ಹೊತ್ತಿಸಿದ ಒಲೆ ಇಂದಿಗೂ ಆರಿಲ್ಲ. ನಿತ್ಯ ನಿರಂತರವಾಗಿ ನಡೆಯುತ್ತಿರುವುದು ವಿಶೇಷ ಎಂದರು.

ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ಮಾತನಾಡಿ, ಮನುಷ್ಯ ಜೀವಂತವಾಗಿ ಇದ್ದಾಗಲೇ ಮಾಡಿದ ಸೇವಾ ಕಾರ್ಯಗಳು, ಸಾಧನೆಗಳು ಮುಂದಿನ ಪೀಳಿಗೆಗೆ ಸ್ಮರಣೀಯವಾಗಲಿ, ಅವರ ಮಾರ್ಗದಲ್ಲಿ ಮುನ್ನಡೆಯಲಿ ಎಂದು ಅವರ ಸ್ಮರಣೀಯನ್ನಾಗಲಿ, ಪುತ್ಥಳಿಯನ್ನಾಗಲಿ ನಿರ್ಮಿಸುತ್ತಾರೆ. ಆದರೆ ಇದೀಗ ಕಾಲ ವ್ಯತಿರಿಕ್ತವಾಗಿದೆ. ಸರ್ಕಾರದ ಹಣದಲ್ಲಿ ಕೆಲವರು ಜೀವಂತವಾಗಿದ್ದಾಗಲೇ ಬಡಾವಣೆಗಳಿಗೆ, ವೃತ್ತಗಳಿಗೆ, ಸಭಾಂಗಣಗಳಿಗೆ, ಕೆರೆಗಳಿಗೆ ಹೆಸರುಗಳನ್ನಿಟ್ಟಿದ್ದಾರೆ. ದಾವಣಗೆರೆಯಲ್ಲಿ ಯಾರಾದರೂ ಮಹಾಪುರುಷರ ಹೆಸರು ಇಡಬೇಕೆಂದರೆ ಎಲ್ಲೂ ಕೂಡ ಜಾಗ ಇಲ್ಲದಂತೆ ಮಾಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ದೂಡಾ ಮಾಜಿ ಆಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ಕೊಂಡಜ್ಜಿ ರಸ್ತೆಯ ಈ ವೃತ್ತಕ್ಕೆ ಸಿದ್ಧಗಂಗಾ ಸ್ವಾಮೀಜಿ ಹೆಸರು ಮತ್ತು ಪುತ್ಥಳಿ ನಿರ್ಮಿಸಿದ್ದು, ಮುಂದಿನ ದಿನಗಳಲ್ಲಿ ಕಂಚಿನ ಪ್ರತಿಮೆ ಪ್ರತಿಷ್ಠಾಪಿಸಲಾಗುವುದು ಎಂದು ಹೇಳಿದರು.

ಚನ್ನಗಿರಿ ಹಿರೇಮಠದ ಡಾ. ಕೇದಾರಲಿಂಗ ಶಿವಶಾಂತವೀರ ಶಿವಾಚಾರ್ಯ ಸ್ವಾಮೀಜಿ, ಚಿತ್ರದುರ್ಗ ಐಮಂಗಲದ ಶ್ರೀ ಮಹಾ ಶಿವಶರಣ ಹರಳಯ್ಯ ಗುರುಪೀಠದ ಶ್ರೀ ಬಸವ ಹರಳಯ್ಯ ಸ್ವಾಮೀಜಿ, ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಜಿಗರಹಳ್ಳಿ ಶ್ರೀ ಜಗದ್ಗುರು ಮರುಳಶಂಕರ ದೇವರ ಗುರುಪೀಠದ ಶ್ರೀ ಸಿದ್ಧಬಸವ ಕಬೀರ ಸ್ವಾಮೀಜಿ, ಬೆಂಗಳೂರು ಸರ್ವಧರ್ಮ ಸಮನ್ವಯ ಪೀಠದ ಶ್ರೀ ಸಂಗಮಾನಂದ ಸ್ವಾಮೀಜಿ ಮಾತನಾಡಿದರು.

ಶ್ರೀಮತಿ ಶಾಂತಮ್ಮ, ದೂಡಾ ಸದಸ್ಯೆ ವಾಣಿ ಬಕ್ಕೇಶ್, ಉದ್ಯಮಿ ಬಕ್ಕೇಶ್, ಗಾಂಧಿನಗರ ಪಿಎಸ್‌ಐ ಲಲಿತಮ್ಮ, ಬಿಜೆಪಿ ಮುಖಂಡರಾದ ಗೌತಮ್ ಜೈನ್, ಟಿಂಕರ್ ಮಂಜಣ್ಣ, ನವೀನ್, ಹೆಚ್.ಎಸ್. ವೀರೇಶ್, ಶಿವಪ್ರಸಾದ್, ಬೇಕರಿ ಶ್ರೀನಿವಾಸ್, ತೆಲಿಗಿ ಮಹೇಶ್ವರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಅಕ್ಕಮಹಾದೇವಿ ಭಜನಾ ಮಂಡಳಿಯ ಮಹಾದೇವಿ ಮತ್ತು ಸಂಗಡಿಗರು ವಚನ ಗೀತೆ, ಭಕ್ತಿಗೀತೆಗಳನ್ನು ಹಾಡಿದರು. ಪಕ್ಕೀರಗೌಡ ಹಳೆಮನಿ ನಿರೂಪಿಸಿದರು. ಶಂಕರ್ ಶಿರೇಕರ್ ಪವಾರ್ ಸ್ವಾಗತಿಸಿದರು.

## ಜನ್ಮಸಿದ್ಧ ಪೌರತ್ವ ಅಂತ್ಯಕ್ಕೆ ಆದೇಶ

**(1ನೇ ಪುಟದಿಂದ)** ಈ ಆದೇಶದಿಂದ ಅಮೆರಿಕದಲ್ಲಿರುವ ಭಾರತೀಯ ಮೂಲದ ಲಕ್ಷಾಂತರ ಜನರು ಸಮಸ್ಯೆ ಎದುರಿಸ ಬೇಕಾಗಲಿದೆ.

ವರ್ಷಗಳಿಂದ ಕೆಲವೊಮ್ಮೆ ದಶಕಗಳಿಂದ ಗ್ರೀನ್ ಕಾರ್ಡ್‌ಗಾಗಿ ಕಾಯುತ್ತಿರುವ ಭಾರತೀಯ ಮೂಲದವರು ಈಗ ಸಮಸ್ಯೆ ಎದುರಿಸಲಿದ್ದಾರೆ.

ಜನ್ಮ ಸಿದ್ಧವಾಗಿ ಪೌರತ್ವ ನೀಡುವುದು ಅಸಂಗತ ಎಂದಿರುವ ಟ್ರಂಪ್, ಈ ರೀತಿ ಪೌರತ್ವ ನೀಡುವುದನ್ನು ತಡೆಯುವ ಮೂಲಕ ಅಕ್ರಮ ವಲಸೆಗೆ ತಡೆ ಹಾಕುವುದಾಗಿ ಹೇಳಿದ್ದಾರೆ.

ಸಂವಿಧಾನದ 14ನೇ ತಿದ್ದುಪಡಿಯು ಅಮೆರಿಕದಲ್ಲಿ ಜನಿಸಿದ ಎಲ್ಲರಿಗೂ ಪೌರತ್ವ ನೀಡುವ ಉದ್ದೇಶದ್ದಲ್ಲ ಎಂದವರು ಹೇಳಿದ್ದಾರೆ.

ಆದರೆ ಟ್ರಂಪ್ ಕ್ರಮದಿಂದ ಈಗಾಗಲೇ ದಮನಿತ ಸಮುದಾಯಗಳು ಇನ್ನಷ್ಟು ಸಮಸ್ಯೆ ಎದುರಿಸಲಿವೆ ಹಾಗೂ ವಲಸೆ ಕುಟುಂಬಗಳಲ್ಲಿ ಅನಿಶ್ಚಿತತೆ ಉಂಟಾಗಲಿದೆ ಎಂದು ಟೀಕಾಕಾರರು ಹೇಳಿದ್ದಾರೆ. ಈ ರೀತಿಯ ಕ್ರಮ ದೂರಗಾಮಿ ಪರಿಣಾಮ ಬೀರಲಿದೆ. ಇದರಿಂದ ಶಾಲೆಗಳು, ಕಚೇರಿಗಳು ಹಾಗೂ ಇಡೀ ಸಮುದಾಯಗಳ ಮೇಲೆ ಪರಿಣಾಮವಾಗಲಿದೆ.

ಈ ಆದೇಶ ಹೊರ ಬಿದ್ದ 30 ದಿನಗಳ ನಂತರ ಕ್ರಮ ಜಾರಿಗೆ ಬರಲಿದೆ. ಟ್ರಂಪ್ ಕ್ರಮವನ್ನು ಕಾನೂನಾತ್ಮಕವಾಗಿ ಪ್ರಶ್ನಿಸುವ ಸಾಧ್ಯತೆ ಇದೆ. ಅಮೆರಿಕದ ಸೆನ್ಸಸ್ ಬ್ಯೂರೋ ಪ್ರಕಾರ 50 ಲಕ್ಷ ಭಾರತೀಯ ಅಮೆರಿಕನ್ನರು ಇದ್ದಾರೆ. ಇವರು ಒಟ್ಟು ಜನಸಂಖ್ಯೆಯ ಶೇಕಡಾ 1.47ರಷ್ಟಿದ್ದಾರೆ. ಇವರಲ್ಲಿ ಶೇ. 34 ರಷ್ಟು ಮಾತ್ರ ಅಮೇರಿಕ ಸಂಜಾತರು. ಉಳಿದವರು ಭಾರತದಿಂದ ವಲಸೆ ಬಂದವರು.

ಅಮೆರಿಕದಲ್ಲಿ ಕೆಲಸ ನಿರ್ವಹಿಸುತ್ತಿರುವ ಬಹುತೇಕರು ಹೆಚ್1ಬಿ ವೀಸಾ ಪಡೆದಿದ್ದಾರೆ. ಇವರಿಗೆ ನೂರಾರು ಮಕ್ಕಳು ಅಮೆರಿಕದಲ್ಲಿ ಜನಿಸಿದ್ದಾರೆ. ಇನ್ನು ಮುಂದೆ ಇವರಿಗೆ ಅಮೆರಿಕದ ಪೌರತ್ವ ಸ್ವಯಂ ಚಾಲಿತವಾಗಿ ದೊರೆಯುವುದಿಲ್ಲ.

## ಸಂವಿಧಾನ : ಬ್ರಾಹ್ಮಣರ ಕೊಡುಗೆ

**(1ನೇ ಪುಟದಿಂದ)** ಬೇಕಾಗಿರುತ್ತಿತ್ತು ಎಂದು ಡಾ. ಅಂಬೇಡ್ಕರ್ ಅವರು ಭಂಡಾರ್ಕರ್ ಇನ್‌ಸ್ಟಿಟ್ಯೂಟ್‌ನಲ್ಲಿ ಮಾತನಾಡುವಾಗ ತಿಳಿಸಿದ್ದರು ಎಂದು ನ್ಯಾಯಮೂರ್ತಿ ದೀಕ್ಷಿತ್ ಹೇಳಿದ್ದಾರೆ.

ಸಂವಿಧಾನ ರಚನಾ ಕರಡು ಸಮಿತಿಯಲ್ಲಿ ಇದ್ದ ಏಳು ಸದಸ್ಯರ ಪೈಕಿ ಮೂವರು ಬ್ರಾಹ್ಮಣರಿದ್ದರು. ಅಲ್ಲಾಡಿ ಕೃಷ್ಣಮೂರ್ತಿ ಅಯ್ಯರ್, ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಹಾಗೂ ಬಿ.ಎನ್. ರಾವ್ ಅವರು ಬ್ರಾಹ್ಮಣರಾಗಿದ್ದರು. ಇವರು ಸಂವಿಧಾನ ರೂಪಿಸುವಲ್ಲಿ ಪಾತ್ರ ವಹಿಸಿದ್ದರು ಎಂದು ನ್ಯಾಯಮೂರ್ತಿ ದೀಕ್ಷಿತ್ ಹೇಳಿದ್ದಾರೆ.

ಬ್ರಾಹ್ಮಣರ ಕುರಿತು ತಮ್ಮ ನಿಲುವು ಸ್ಪಷ್ಟಪಡಿಸಿರುವ ಅವರು, ಈ ಪದವು ಜಾತಿಗಿಂತ ವರ್ಣಕ್ಕೆ ಸಂಬಂಧಿಸಿದಾಗಿದೆ ಎಂದಿದ್ದಾರೆ.

ವೇದವ್ಯಾಸರು ಬೆಸ್ತ ಮಹಿಳೆಯೊಬ್ಬರ ಪುತ್ರರಾಗಿದ್ದರು. ರಾಮಾಯಣ ರಚಿಸಿದ ವಾಲ್ಮೀಕಿ ಪರಿಶಿಷ್ಟ ಜಾತಿ ಇಲ್ಲವೇ ಪಂಗಡಕ್ಕೆ ಸೇರಿದವರಾಗಿದ್ದರು. ಹೀಗೆಂದು ನಾವು ಅವರನ್ನು ಕಡೆಗಣಿಸಿಲ್ಲ. ನಾವು ರಾಮದೇವರನ್ನು ಶತಮಾನಗಳಿಂದ ಆರಾಧಿಸುತ್ತಿದ್ದೇವೆ. ರಾಮದೇವರ ಮೌಲ್ಯಗಳನ್ನು ಸಂವಿಧಾನದಲ್ಲಿ ಅಳವಡಿಸಿದ್ದೇವೆ ಎಂದು ನ್ಯಾಯಮೂರ್ತಿ ದೀಕ್ಷಿತ್ ಹೇಳಿದರು. ಈ ಹಿಂದೆ ನಾನು ಬ್ರಾಹ್ಮಣೇತರ ರಾಷ್ಟ್ರವಾದಿ ಚಳುವಳಿಯಲ್ಲಿ ಭಾಗಿಯಾಗಿದ್ದೆ. ಆದರೆ ನ್ಯಾಯಾಧೀಶನಾದ ನಂತರ ಇಂತಹ ಚಟುವಟಿಕೆಗಳಿಂದ ದೂರ ಉಳಿದಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

## ಪಕ್ಷ ಬಲಪಡಿಸಲು ಖರ್ಗೆ ಕರೆ

**(1ನೇ ಪುಟದಿಂದ)** ಕೆಣಕಿದರೆ ನೀವು ಸುಟ್ಟುಹೋಗುತ್ತೀರಿ, ನಾವು ಬೆಂಕಿ ಇದ್ದ ಹಾಗೆ ಎಂದರು. ಡಾ. ಮನಮೋಹನ್ ಸಿಂಗ್ ಆಡಳಿತದಲ್ಲಿ ನಾವು ನೀಡಿದ ಒಂದು ಕಾರ್ಯಕ್ರಮವನ್ನೂ ನೀವು ತರಲಾಗಲಿಲ್ಲ, ಆದರೆ, ಅಂದು ನಮ್ಮ ಯೋಜನೆಗಳನ್ನು ಟೀಕಿಸಿ, ಸುಳ್ಳು ಪ್ರಚಾರ ಮಾಡಿ ನೀವು ಅಧಿಕಾರಕ್ಕೆ ಬಂದಿರಿ. ಅಧಿಕಾರಕ್ಕೆ ಬಂದ ನಂತರ ನಮ್ಮ ಒಂದು ಕಾರ್ಯಕ್ರಮನ್ನಾದರೂ ನೀವು ಜಾರಿಗೆ ತಂದಿದ್ದೀರಾ ನಮ್ಮನ್ನು ಒಡೆಯುವ ಕೆಲಸ ಮಾಡುತ್ತಿದ್ದೀರಿ, ದಲಿತ, ಬಡ ಹಾಗೂ ರೈತ ವಿರೋಧಿ ನೀತಿ ಅನುಸರಿಸುತ್ತಿದ್ದೀರಿ, ಹೋರಾಟ ಮತ್ತು ಬೇಡಿಕೆಗಳಿಗೆ ನಿಮ್ಮಲ್ಲಿ ಮನ್ನಣೆಯೇ ಇಲ್ಲ, ನೀವು ಸಂವಿಧಾನ ವಿರೋಧಿಗಳು.

ರೈತರ ಬಗ್ಗೆ ಪ್ರಧಾನಿ ಮೋದಿ ಅವರಿಗೆ ಕಿಂಚಿತ್ತೂ ಆಸಕ್ತಿ ಇಲ್ಲ, ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಪಡಿಸಿಲ್ಲ ಎಂದು ಕೇಂದ್ರ ಸರ್ಕಾರದ ಮೇಲೆ ವಾಗ್ದಾಳಿ ಮಾಡಿದರು.

# ರಾಣೇಬೆನ್ನೂರು : ನಗರಸಭೆ ಚುನಾವಣೆಗೆ ಶೀಘ್ರದಲ್ಲೇ ಮುಹೂರ್ತ ಫಿಕ್ಸ್..!

## ಬಿಜೆಪಿಯಲ್ಲಿ ಬಿರುಕು ಬಿಟ್ಟರೆ ಕಾಂಗ್ರೆಸ್ ಆಡಳಿತ ನಿಶ್ಚಿತ..!

ರಾಣೇಬೆನ್ನೂರು, ಜ.21- ವರ್ಷಕ್ಕೂ ಅಧಿಕ ಕಾಲದಿಂದ ಖಾಲಿ ಇರುವ ರಾಣೇಬೆನ್ನೂರು ನಗರಸಭೆಯ ಹಿಂದುಳಿದ 'ಅ' ವರ್ಗದ ಮಹಿಳೆಯ ಅಧ್ಯಕ್ಷ ಸ್ಥಾನ, ಸಾಮಾನ್ಯ ವರ್ಗಕ್ಕೆ ಉಪಾಧ್ಯಕ್ಷ ಸ್ಥಾನ ಮೀಸಲಾಗಿದ್ದು, ಚುನಾವಣೆ ನಡೆಸಲು ಚುನಾವಣಾಧಿಕಾರಿ ಹಾವೇರಿ ಉಪವಿಭಾಗಾಧಿಕಾರಿ ಜ.28 ರಂದು ಸಭೆ ಕರೆದಿದ್ದಾರೆ.

ಸಂಸದರ ಜತೆಗೆ ಆರ್. ಶಂಕರ್ ಗುಂಪಿನಿಂದ ಬಂದವರು ಸೇರಿದಂತೆ ಒಟ್ಟು 22 ಸದಸ್ಯರನ್ನು ಹೊಂದಿರುವರೂ ಬಿಜೆಪಿಯು ಅಧಿಕಾರ ಹಿಡಿಯುವ ಸ್ಪಷ್ಟ ಚಿತ್ರಣ ಕಂಡು ಬರುತ್ತಿದೆ. ಆದರೆ, ಮಾಜಿ ಶಾಸಕ, ಜಿಲ್ಲಾ ಬಿಜೆಪಿ ಅಧ್ಯಕ್ಷ ಅರುಣ ಕುಮಾರ ಪೂಜಾರ ಹಾಗೂ ಅಚಲ ಹಿಂದುತ್ವವಾದಿ ಪ್ರಕಾಶ ಬುರಡಿಕಟ್ಟಿ ಗುಂಪಿನ ನಡುವೆ ಇರಬಹುದಾದ 'ಶೀತಲ ಸಮರ' ಇಲ್ಲಿ ಪ್ರಭಾವ ಬೀರಿದರೆ, ಫಲಿತಾಂಶ ತಲೆ ಕೆಳಗಾಗಬಹುದು ಎಂದು ಹೇಳಲಾಗುತ್ತಿದೆ.

ಮೊದಲನೇ ಅವಧಿಯ ಅಧ್ಯಕ್ಷರ ಬದಲಾವಣೆ ಸಂದರ್ಭದಲ್ಲಿ ನಡೆದ ರಾಜಕೀಯ ಚದುರಂಗದಾಟದಲ್ಲಿ ಕಾಂಗ್ರೆಸ್ ಸದಸ್ಯರ ಬೆಂಬಲ ಪಡೆದು ಬಿಜೆಪಿಯ ರೂಪಾ ಚಿನ್ನಕಟ್ಟಿ ಅವರೇ ಅಧ್ಯಕ್ಷರಾಗಿ ಮುಂದು ವರೆದಿದ್ದರು.

ಈ ಬಾರಿಯೂ ರೂಪಾ ಚಿನ್ನಕಟ್ಟಿ ಅವರ ಹೆಸರು ರೇಸ್‌ನಲ್ಲಿ ಕೇಳಿಬರುತ್ತಿದ್ದು, ಬಿಜೆಪಿ ಕೈಕೊಟ್ಟರೆ, ಕಾಂಗ್ರೆಸ್ ಋಣ ತೀರಿಸಲು ಬುರಡಿಕಟ್ಟಿ ಬಣ ಸಜ್ಜಾಗಬಹುದು ಎನ್ನುವ ಮಾತುಗಳು ಕೇಳಿಬರುತ್ತಿವೆ. ಕಾಂಗ್ರೆಸ್‌ನಲ್ಲಿ ಮೂವರು ಆಕಾಂಕ್ಷಿಗಳಿದ್ದರೂ ಸಹ ಪಕ್ಷವು ಚಂಪಾ ಬಿಸಲ ಹಳ್ಳಿ ಅವರನ್ನೇ ಅಂತಿಮಗೊಳಿಸಬಹುದು ಎನ್ನಲಾಗುತ್ತಿದ್ದು, ಪ್ರಕಾಶ ಬುರಡಿಕಟ್ಟಿ ಬಳಗ ಕಾಂಗ್ರೆಸ್ ಬೆಂಬಲಿಸಿದರೆ, ಪ್ರಕಾಶ ಬುರಡಿಕಟ್ಟಿ ಅವರು ಉಪಾಧ್ಯಕ್ಷರಾಗಿ ಆಡಳಿತದ ಚುಕ್ಕಾಣಿ ಹಿಡಿಯಬಹುದು ಎನ್ನುವ ಚರ್ಚೆಗಳು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿವೆ.

**ಕಾಂಗ್ರೆಸ್ ಪ್ರವಾಸ..**

**ಚುನಾವಣೆ ದಿನಾಂಕ ನಿಗದಿಯಾಗುತ್ತಲೇ ಶಂಕರ್ ಬೆಂಬಲಿಗರು ಸೇರಿದಂತೆ ಕಾಂಗ್ರೆಸ್ ಸದಸ್ಯರು ನಿನ್ನೆ ಪ್ರವಾಸಕ್ಕೆ ತೆರಳಿದ್ದಾರೆ ಎನ್ನುವ ಸುದ್ದಿ ಕೇಳಿ ಬಂದಿದ್ದು, ಸಂಸದ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಬಿಜೆಪಿ ಭಿನ್ನಾಭಿಪ್ರಾಯ ಹೋಗಲಾಡಿಸುವ ಬಿರುಸಿನ ಪ್ರಯತ್ನ ನಡೆದಿದ್ದು, ಒಂದೆರಡು ದಿನಗಳಲ್ಲಿ ಬಿಜೆಪಿ ಸದಸ್ಯರೂ ಸಹ ಪ್ರವಾಸಕ್ಕೆ ತೆರಳಬಹುದು ಎಂದು ಹೇಳಲಾಗುತ್ತಿದೆ.**

# ಕೂಲಿ ಕಾರ್ಮಿಕರ ಮನೆಗಳ ನಾಶ

## ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ಪ್ರಕರಣ



ಬೆಂಗಳೂರು, ಜ.21- ಇಲ್ಲಿನ ಪೀಣ್ಯ ಪ್ರದೇಶದ ಕೊಳಚೆ ಪ್ರದೇಶದಲ್ಲಿರುವ ದಿನಗೂಲಿ ಕಾರ್ಮಿಕರ ಮನೆಗಳನ್ನು ನಾಶ ಮಾಡಿದ ಆರೋಪದ ಮೇಲೆ ಬಿಜೆಪಿ ಶಾಸಕ ಮುನಿರತ್ನ ಹಾಗೂ ಇತರ ಆರು ಜನರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಕೊಳಚೆ ಪ್ರದೇಶದ ನಿವಾಸಿಯೊಬ್ಬರು ನೀಡಿದ ದೂರನ್ನು ಆಧರಿಸಿ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಮುನಿರತ್ನ ಹಾಗೂ ಅವರ ಸಹಚರರು ಜೆಸಿಬಿ ಯಂತ್ರ ಬಳಸಿ ಅಕ್ಕಮಹಾದೇವಿ ಲೇಔಟ್ ಬಳಿ 60 ಕುಟುಂಬಗಳು ನೆಲೆಸಿದ್ದ ಮನೆಗಳನ್ನು ನಾಶ ಮಾಡಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ.

ಯಾವುದೇ ಮುನ್ಸೂಚನೆ ನೀಡದೆ ಮನೆಗಳನ್ನು ನಾಶ ಮಾಡಲಾಗಿದೆ ಇದರಿಂದಾಗಿ ಪ್ರತಿ ಕುಟುಂಬ 20 ರಿಂದ 70 ಸಾವಿರ ರೂ.ಗಳ ಹಣ ಹಾಗೂ ಸುಮಾರು 30 ಗ್ರಾಂ ಬಂಗಾರ ಕಳೆದುಕೊಂಡಿರುವುದಾಗಿ ಮಹಿಳೆ ಒಬ್ಬರು ದೂರು ನೀಡಿದ್ದಾರೆ.

ಮುನಿರತ್ನ ಕಾರ್ಯಾಚರಣೆಯ ಉಸ್ತುವಾರಿ ನೋಡಿಕೊಂಡಿದ್ದರು. ತಮ್ಮ ಸಹಚರರಿಗೆ ಮನೆಗಳನ್ನು ನಾಶ ಮಾಡಲು ತಿಳಿಸಿದ್ದರು. ಇಲ್ಲಿನ ನಿವಾಸಿಗಳು ಈ ಬಗ್ಗೆ ಪ್ರಶ್ನಿಸಿದಾಗ ಬೆದರಿಕೆ ಹಾಕಿದ್ದರು. ಮನೆ ಖಾಲಿ ಮಾಡಿ ಉತ್ತರ ಕರ್ನಾಟಕಕ್ಕೆ ಮರಳುವಂತೆ ತಿಳಿಸಿದರು ಎಂದು ದೂರಿನಲ್ಲಿ ಹೇಳಲಾಗಿದೆ.

ಮನೆಗಳ ನಾಶ ಸಂದರ್ಭದಲ್ಲಿ ಮಹಿಳೆಯರ ಮೇಲೆ ದೈಹಿಕ ಹಲ್ಲೆ ನಡೆಸಲಾಗಿದೆ ಎಂದು ದೂರಲಾಗಿದೆ. ಮನೆಗಳ ನಾಶ ಪ್ರಕರಣವಷ್ಟೇ ಅಲ್ಲದೆ ಜಾತಿನಿಂದನೆ ಪ್ರಕರಣ ಸಹ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

## ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ನಾಲ್ಕು ರ‍್ಯಾಂಕ್‌ಗಳು






ದಾವಣಗೆರೆ, ಜ.21- ನಗರದ ಪ್ರತಿಷ್ಠಿತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದ ಆಂಗ್ಲ ವಿಭಾಗಕ್ಕೆ 2023-24ನೇ ಶೈಕ್ಷಣಿಕ ಸಾಲಿನಲ್ಲಿ ದಾವಣಗೆರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆದ ಪರೀಕ್ಷೆಯಲ್ಲಿ ನಾಲ್ಕು ರ‍್ಯಾಂಕ್‌ಗಳು ಬಂದಿವೆ ಎಂದು ಕಾಲೇಜಿನ ಪ್ರಾಚಾರ್ಯ ಬಿ.ಸಿ. ತಹಶೀಲ್ದಾರ್ ತಿಳಿಸಿದ್ದಾರೆ.

ಸಿಮ್ರಾನ್ ತಾಜ್ 4ನೇ ರ‍್ಯಾಂಕ್, ಗೌಡ್ರು ಅಂಜಿನಪ್ಪ 6ನೇ, ಎಚ್.ಆರ್.ರಕ್ಷಾ 8ನೇ ಹಾಗೂ ಪಾರೂಕ್ ಉಸ್ಮಾನಿ 9ನೇ ರ‍್ಯಾಂಕ್ ಪಡೆದಿದ್ದಾರೆ ಹಾಗೂ ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಪ್ರಾಚಾರ್ಯ ಬಿ.ಸಿ. ತಹಶೀಲ್ದಾರ್, ಆಂಗ್ಲ ವಿಭಾಗದ ಸಂಯೋಜನಾಧಿಕಾರಿ ಎಸ್. ಚಂದ್ರಶೇಖರಪ್ಪ, ಪ್ರಾಧ್ಯಾಪಕ ಡಾ.ಪಿ.ವೆಂಕಟೇಶ್, ಡಾ. ಕರಿಬಸಪ್ಪ ಸಿ. ನಂದಿಹಳ್ಳಿ, ಸಹ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

## ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ.,

**ನಂ. 432, ಕುವೆಂಪು ರಸ್ತೆ (ಲಾಯರ್ ರಸ್ತೆ), ಕೆ.ಬಿ. ಬಡಾವಣೆ, ದಾವಣಗೆರೆ - 577 002.**

**ನಮೂನೆ - 12, ನಿಯಮ - 14 (3)ರ ಪ್ರಕಾರ**

ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಚುನಾವಣಾಧಿಕಾರಿಗಳು ಬೆಂಗಳೂರು ಪ್ರಾಂತ, ಬೆಂಗಳೂರುರವರ ಆದೇಶ ಸಂಖ್ಯೆ ಜೆಆರ್‌ಬಿ/ಚುನಾವಣೆ/ಸಿಆರ್-137/2024-25 ದಿನಾಂಕ : 15.01.2025ರ ಆದೇಶದಂತೆ **ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ದಾವಣಗೆರೆ, ದಾವಣಗೆರೆ ತಾಲ್ಲೂಕು** ಇದರ ಆಡಳಿತ ಮಂಡಲಿಯ ಈ ಕೆಳಕಾಣಿಸಿದ ಒಟ್ಟು 14 ಸ್ಥಾನಗಳಿಗೆ **ದಿನಾಂಕ : 08.02.2025ರಂದು ಶನಿವಾರ ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಕುವೆಂಪು ಕನ್ನಡ ಭವನ, ವಿದ್ಯಾನಗರ ರಸ್ತೆ, ದಾವಣಗೆರೆ** ಇಲ್ಲಿ ಚುನಾವಣೆಯನ್ನು ನಡೆಸಲಾಗುವುದೆಂದು ಚುನಾವಣಾ ನೋಟೀಸ್ ನೀಡಲಾಗಿದೆ.

**ಚುನಾಯಿಸತಕ್ಕ ಆಡಳಿತ ಮಂಡಲಿ ಒಟ್ಟು 14 ಸ್ಥಾನಗಳ ಕ್ಷೇತ್ರ ವಿಂಗಡಣೆ ಹಾಗೂ ಮೀಸಲಾತಿ ವಿವರ : -**
**ಸಾಲಗಾರರ ಕ್ಷೇತ್ರ - 12:** ಸಾಮಾನ್ಯ -06, ಪರಿಶಿಷ್ಟ ಜಾತಿ -01, ಪರಿಶಿಷ್ಟ ಪಂಗಡ -01, ಹಿಂದುಳಿದ ವರ್ಗ ಅ/ಎ-01, ಹಿಂದುಳಿದ ವರ್ಗ ಬ/ಬಿ-01 ಹಾಗೂ ಮಹಿಳಾ ಮೀಸಲು -02 ಸ್ಥಾನ. **ಸಾಲಗಾರರಲ್ಲದ ಕ್ಷೇತ್ರ - 02 : (ಸಾಮಾನ್ಯ )**

**ಕ್ಷೇತ್ರವಾರು ಸ್ಥಾನಗಳ ಹಾಗೂ ಮೀಸಲಾತಿ ವಿವರಗಳು ಈ ಕೆಳಕಂಡಂತೆ ಇರುತ್ತದೆ**

| ಕ್ರ.ಸಂ. | ಕ್ಷೇತ್ರ | ಮೀಸಲಾತಿ ವಿವರ |
|---|---|---|
| 01 | ಬೇತೂರು ಕ್ಷೇತ್ರ | ಸಾಲಗಾರರ - ಸಾಮಾನ್ಯ |
| 02 | ಮಾಯಕೊಂಡ ಕ್ಷೇತ್ರ | ಸಾಲಗಾರರ - ಸಾಮಾನ್ಯ |
| 03 | ಆನಗೋಡು ಕ್ಷೇತ್ರ | ಸಾಲಗಾರರ - ಸಾಮಾನ್ಯ |
| 04 | ಹದಡಿ ಕ್ಷೇತ್ರ | ಸಾಲಗಾರರ - ಸಾಮಾನ್ಯ |
| 05 | ಕಬ್ಬೂರು ಕ್ಷೇತ್ರ | ಸಾಲಗಾರರ - ಸಾಮಾನ್ಯ |
| 06 | ಬೆಳವನೂರು ಕ್ಷೇತ್ರ | ಸಾಲಗಾರರ - ಸಾಮಾನ್ಯ |
| 07 | ಗುಡಾಳು ಕ್ಷೇತ್ರ | ಪರಿಶಿಷ್ಟ ಜಾತಿ |
| 08 | ಅಣಜಿ ಕ್ಷೇತ್ರ | ಪರಿಶಿಷ್ಟ ಪಂಗಡ |
| 09 | ಬಾಡಾ ಕ್ಷೇತ್ರ | ಹಿಂದುಳಿದ ವರ್ಗ - ಅ/ಎ |
| 10 | ಲೋಕಿಕೆರೆ ಕ್ಷೇತ್ರ | ಹಿಂದುಳಿದ ವರ್ಗ - ಬ/ಬಿ |
| 11 | ನೇರ್ಲಿಗೆ ಕ್ಷೇತ್ರ | ಮಹಿಳಾ ಮೀಸಲು |
| 12 | ದೊಡ್ಡಬಾತಿ ಕ್ಷೇತ್ರ | ಮಹಿಳಾ ಮೀಸಲು |
| ಸಾಲಗಾರರಲ್ಲದ ಕ್ಷೇತ್ರ | | |
| 01 | ದಾವಣಗೆರೆ ದಕ್ಷಿಣ ಮತಕ್ಷೇತ್ರ | ಸಾಮಾನ್ಯ ಕ್ಷೇತ್ರ |
| 02 | ದಾವಣಗೆರೆ ಉತ್ತರ ಮತಕ್ಷೇತ್ರ | ಸಾಮಾನ್ಯ ಕ್ಷೇತ್ರ |

**ಚುನಾವಣಾ ವೇಳಾಪಟ್ಟಿ**

| ಕ್ರಮ ಸಂಖ್ಯೆ | ಚುನಾವಣಾ ಕಾರ್ಯಸೂಚಿ | ದಿನಾಂಕ, ವಾರ ಸಮಯ | ನಿಯಮ | ವಿವರ ಮತ್ತು ಸ್ಥಳ |
|---|---|---|---|---|
| 1. | ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸ್ವೀಕರಿಸಲು ಪ್ರಾರಂಭದ ದಿನಾಂಕ | ದಿನಾಂಕ : 24.01.2025ನೇ ಶುಕ್ರವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ಘಂಟೆಯವರೆಗೆ | | ಬ್ಯಾಂಕಿನ ಕಛೇರಿಯಲ್ಲಿ ರಿಟರ್ನಿಂಗ್/ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ |
| 2. | ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸ್ವೀಕರಿಸಲು ಕೊನೆಯ ದಿನಾಂಕ | ದಿನಾಂಕ : 31.01.2025ನೇ ಶುಕ್ರವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ಘಂಟೆಯವರೆಗೆ. | 14(ಎ) | ಬ್ಯಾಂಕಿನ ಕಛೇರಿಯಲ್ಲಿ ರಿಟರ್ನಿಂಗ್/ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ |
| 3. | ಚುನಾವಣಾಧಿಕಾರಿಗಳಿಂದ ನಾಮಪತ್ರ ಪರಿಶೀಲನೆ | ದಿನಾಂಕ : 01.02.2025ನೇ ಶನಿವಾರ ಬೆಳಿಗ್ಗೆ 11.00 ರಿಂದ | 14(ಬಿ) | ಬ್ಯಾಂಕಿನ ಕಛೇರಿಯಲ್ಲಿ |
| 4. | ಚುನಾವಣಾಧಿಕಾರಿಗಳಿಂದ ಕ್ರಮಬದ್ಧವಾಗಿ ನಾಮನಿರ್ದೇಶನಗೊಂಡ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ದಿನಾಂಕ : 01.02.2025ನೇ ಶನಿವಾರ ನಾಮಪತ್ರಗಳ ಪರಿಶೀಲನೆ ನಂತರ | 14ಬಿ(4) | ಬ್ಯಾಂಕಿನ ಕಛೇರಿಯ ಸೂಚನಾ ಫಲಕದಲ್ಲಿ |
| 5. | ಸ್ಪರ್ಧಿಸಿರುವ ಅಭ್ಯರ್ಥಿಗಳಿಂದ ನಾಮಪತ್ರವನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕ | ದಿನಾಂಕ : 02.02.2025ನೇ ಭಾನುವಾರ ಮಧ್ಯಾಹ್ನ 3.00 ಘಂಟೆಯೊಳಗೆ | 14(ಸಿ) | ಬ್ಯಾಂಕಿನ ಕಛೇರಿಯಲ್ಲಿ ರಿಟರ್ನಿಂಗ್/ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ |
| 6. | ಚುನಾವಣಾಧಿಕಾರಿಗಳಿಂದ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿ ಉಳಿದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ದಿನಾಂಕ : 02.02.2025ನೇ ಭಾನುವಾರ ಮಧ್ಯಾಹ್ನ 3.00 ಘಂಟೆಯ ನಂತರ | 14(ಡಿ) | ಬ್ಯಾಂಕಿನ ಕಛೇರಿಯ ಸೂಚನಾ ಫಲಕದಲ್ಲಿ |
| 7. | ಚುನಾವಣಾಧಿಕಾರಿಗಳಿಂದ (ಅವಶ್ಯವಿದ್ದಲ್ಲಿ) ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳನ್ನು ಹಂಚಿಕೆ ಮಾಡುವುದು | ದಿನಾಂಕ : 02.02.2025ನೇ ಭಾನುವಾರ ಸಂಜೆ 4.30 ಘಂಟೆಗೆ | 14(ಇ) | ಬ್ಯಾಂಕಿನ ಕಛೇರಿಯ ಸೂಚನಾ ಫಲಕದಲ್ಲಿ |
| | ಚಿಹ್ನೆಗಳ ಸಮೇತ ಮಾದರಿ ಮತ ಪತ್ರದ ಹಂಚಿಕೆ | ದಿನಾಂಕ : 03.02.2025ನೇ ಸೋಮವಾರ ಮಧ್ಯಾಹ್ನ 3.00 ಘಂಟೆಯ ನಂತರ | 14(ಇ) | ಬ್ಯಾಂಕಿನ ಕಛೇರಿಯ ಸೂಚನಾ ಫಲಕದಲ್ಲಿ |
| 8. | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ : 08.02.2025ನೇ ಶನಿವಾರ ಬೆಳಿಗ್ಗೆ 9.00 ರಿಂದ ಸಂಜೆ 4.00 ಘಂಟೆಯವರೆಗೆ | | ಕುವೆಂಪು ಕನ್ನಡ ಭವನ, ವಿದ್ಯಾನಗರ ರಸ್ತೆ, ದಾವಣಗೆರೆ. |
| 9. | ಮತಗಳ ಎಣಿಕೆ ದಿನಾಂಕ ಮತ್ತು ಸಮಯ | ದಿನಾಂಕ : 08.02.2025ನೇ ಶನಿವಾರ ಮತದಾನ ಮುಗಿದ ನಂತರ | | ಕುವೆಂಪು ಕನ್ನಡ ಭವನ, ವಿದ್ಯಾನಗರ ರಸ್ತೆ, ದಾವಣಗೆರೆ. |
| 10. | ಚುನಾವಣಾಧಿಕಾರಿಗಳಿಂದ ಚುನಾವಣೆ ಫಲಿತಾಂಶ ಘೋಷಣೆ | ದಿನಾಂಕ : 08.02.2025ನೇ ಶನಿವಾರ ಮತ ಎಣಿಕೆ ಮುಗಿದ ನಂತರ | | ಕುವೆಂಪು ಕನ್ನಡ ಭವನ, ವಿದ್ಯಾನಗರ ರಸ್ತೆ, ದಾವಣಗೆರೆ. |

**ದಿನಾಂಕ : 17.01.2025**
**ಸ್ಥಳ : ದಾವಣಗೆರೆ**

**(ಸತೀಶ್‌ನಾಯ್ಕ ಎಲ್.)**
**ರಿಟರ್ನಿಂಗ್ ಅಧಿಕಾರಿ, ಪಿ.ಸಿ.ಎ.ಆರ್.ಡಿ. ಬ್ಯಾಂಕ್, ದಾವಣಗೆರೆ ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ/ಮಾರಾಟಾಧಿಕಾರಿ, ಸ.ಸಂ.ಸ.ನಿ. ಕಛೇರಿ, ದಾವಣಗೆರೆ.**

# ಬೆಳೆ ವಿಮೆ ಪರಿಹಾರಕ್ಕೆ ಆಗ್ರಹಿಸಿ ರಾಜ್ಯ ರೈತ ಸಂಘದಿಂದ ಪ್ರತಿಭಟನೆ



ದಾವಣಗೆರೆ, ಜ. 21 - ಬೆಳೆ ವಿಮೆ ಪರಿಹಾರಕ್ಕೆ ಆಗ್ರಹಿಸಿ, ರಾಜ್ಯ ರೈತ ಸಂಘ, ಹಸಿರುಸೇನೆ ಹುಚ್ಚವ್ವನಹಳ್ಳಿ ಮಂಜುನಾಥ್ ಬಣದಿಂದ ತಹಶೀಲ್ದಾರ್ ಕಚೇರಿ ಎದುರು ಇಂದು ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸೇನೆಯ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್, 2024-25ನೇ ಸಾಲಿನ ಬೆಳೆ ಕಂತನ್ನು ರೈತರು ವಿಮಾ ಕಂಪನಿಗಳಿಗೆ ತುಂಬಿದ್ದು, ಪ್ರಸ್ತುತ ಸಾಲಿನಲ್ಲಿ ಅತಿವೃಷ್ಟಿಯಿಂದಾಗಿ ಬೆಳೆಗಳು ಹಾನಿಯಾಗಿವೆ. ಆದರೂ ಈವರೆಗೂ ಕೃಷಿ ಇಲಾಖೆ ಹಾಗೂ ವಿಮಾ ಕಂಪನಿಗಳು ಸರ್ವೇ ಕಾರ್ಯ ನಡೆಸಿ ವಿಮೆ ಹಣವನ್ನು ಕೊಡಿಸುವ ಬಗ್ಗೆ ರೈತರಲ್ಲಿ ವಿಶ್ವಾಸ ಮೂಡಿಸಿಲ್ಲ ಎಂದರು.

ವಿಮೆ ಕಂತು ಪಾವತಿ ಮಾಡಿಸಿಕೊಳ್ಳುವಾಗ ಕಂಪನಿಗೆ ರೈತರ ಮೇಲೆ ಇರುವ ಕಾಳಜಿ ಕೃಷಿ ಇಲಾಖೆ ಅಧಿಕಾರಿಗಳಿಗೆ ಹಾಗೂ ವಿಮಾ ಕಂಪನಿಗಳಿಗೆ ಪರಿಹಾರ ಕೊಡಿಸುವ ಸಮಯದಲ್ಲಿ ಇರುವುದಿಲ್ಲ.

2023-24ನೇ ಸಾಲಿನ ಬೆಳೆ ವಿಮೆಯಲ್ಲಿ ತಾಲ್ಲೂಕಿನ ಅನೇಕ ರೈತರಿಗೆ ಅನ್ಯಾಯವಾಗಿದ್ದು, ಬೆಳೆ ಸಮೀಕ್ಷೆ ಮಾಡುವ ಸಮಯದಲ್ಲಿ ಗ್ರಾಮ ಸಹಾಯಕರು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ತಪ್ಪಾಗಿ ಬೆಳೆ ಸಮೀಕ್ಷೆ ಮಾಡಿದ್ದು, ಪರಿಣಾಮ ರೈತರಿಗೆ ಇದುವರೆಗೂ ಪರಿಹಾರ ತಲುಪಿಲ್ಲ ಎಂದು ಆರೋಪಿಸಿದರು.

ಪರಿಹಾರಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕೂಡಲೇ 2023-2024 ಮತ್ತು 2024-2025ನೇ ಸಾಲಿನ ಬೆಳೆ ವಿಮೆ ರೈತರಿಗೆ ಅತಿ ಶೀಘ್ರದಲ್ಲಿ ತಲುಪುವಂತೆ ಕ್ರಮ ಕೈಗೊಳ್ಳಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಮನವಿ ಸ್ವೀಕರಿಸಿದ ತಹಶೀಲ್ದಾರ್ ಅಶ್ವತ್ಥ್ ಮಾತನಾಡಿ, ಕೃಷಿ ಇಲಾಖೆ ನಿರ್ದೇಶಕರು ಮತ್ತು ಬೆಳೆ ವಿಮಾ ಕಂಪನಿಯೊಂದಿಗೆ ಮಾತನಾಡಿ, ಸಭೆ ನಡೆಸಿ ಸಮೀಕ್ಷೆಯಿಂದ ಹೊರಗುಳಿದಿರುವ ರೈತರ ಪಟ್ಟಿ ತರಿಸಿಕೊಂಡು ಪರಿಹಾರ ಕೊಡಿಸುವ ಕೆಲಸ ಮಾಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಹುಚ್ಚವ್ವನಹಳ್ಳಿ ಪ್ರಕಾಶ್, ಸುರೇಶ್ ನಾಯಕ್, ಬಸವಾಪುರದ ಸಿದ್ದೇಶ್, ನರಗನಹಳ್ಳಿ ಚೌಡಪ್ಪ, ತಿಪ್ಪೇಸ್ವಾಮಿ, ಚಟ್ಟೋಬನಹಳ್ಳಿ ಕಂಪಳೇಶ್, ಅಣಬೇರು ಅಣ್ಣಪ್ಪ ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದರು.

# ಹೋರ್ಡಿಂಗ್ಸ್‌ಗೆ ಅನುಮತಿ ಅಧಿಕಾರ ಪಿಡಬ್ಲೂಡಿಗೆ ಇಲ್ಲ

ದಾವಣಗೆರೆ, ಜ.21- ಹೋರ್ಡಿಂಗ್ಸ್ ಅಳವಡಿಸಲು ಅನುಮತಿ ನೀಡುವ ಅಧಿಕಾರ ಲೋಕೋಪಯೋಗಿ ಇಲಾಖೆಗೆ ಇಲ್ಲ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ಹೇಳಿದರು.

ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯ ಹೆದ್ದಾರಿ ಅಥವಾ ರಾಷ್ಟ್ರೀಯ ಹೆದ್ದಾರಿಗಳೇ ಆಗಲಿ, ಹೋರ್ಡಿಂಗ್ಸ್ ಅಳವಡಿಕೆಯಿಂದ ಅಪಘಾತಗಳಾಗುವುದಿಲ್ಲ ಎಂಬುದನ್ನು ಖಚಿತ ಪಡಿಸಿಕೊಂಡು ಎನ್‌ಓಸಿ ಕೊಡಲು ಮಾತ್ರ ಪಿಡಬ್ಲೂಡಿಗೆ ಅಧಿಕಾರವಿದೆ. ಎನ್‌ಓಸಿ ಪಡೆದು ಗ್ರಾಮ ಪಂಚಾಯ್ತಿ, ಮಹಾನಗರ ಪಾಲಿಕೆ ಸೇರಿದಂತೆ ಸ್ಥಳೀಯ ಸಂಸ್ಥೆಗಳು ಮಾತ್ರ ಹೋರ್ಡಿಂಗ್ಸ್ ಅಳವಡಿಸಲು ಅನುಮತಿ ನೀಡಬಹುದಾಗಿದೆ ಎಂದರು. ರಸ್ತೆಗಳಲ್ಲಿ ಹಂಪ್ಸ್‌ಗಳ ಅಳವಡಿಕೆಗೂ ಪರವಾನಗಿ ಪಡೆಯಬೇಕು. ಅವೈಜ್ಞಾನಿಕ ಹಂಪ್ಸ್‌ಗಳಿಂದಲೂ ಅಪಘಾತಗಳು ಹೆಚ್ಚುತ್ತಿವೆ ಎಂದು ಹೇಳಿದರು.

ಪದೇ ಪದೇ ಅಪಘಾತವಾಗುವ ಸ್ಥಳಗಳನ್ನು ಗುರುತಿಸಿ, ಅಪಘಾತ ತಡೆಗೆ ಮುಂದಾಗಬೇಕಿದೆ. ಅಪಘಾತಗಳನ್ನು ತಪ್ಪಿಸುವುದು ಪುಣ್ಯದ ಕೆಲಸವಾಗಿದ್ದು, ಎಲ್ಲಾ ಇಲಾಖೆಯವರೂ ಕೈ ಜೋಡಿಸಬೇಕು ಎಂದ ಜಿಲ್ಲಾಧಿಕಾರಿ, ಮುಂದಿನ ಸಭೆಗೆ ಲಾರಿ ಮಾಲೀಕರು, ಆಟೋ ಮಾಲೀಕರು ಸೇರಿದಂತೆ ಸಂಘಟನೆಗಳನ್ನೂ ಸೇರಿಸಿಕೊಳ್ಳಬೇಕಿದೆ.



### ನನಗೂ ಭಯ ಆಗುತ್ತೆ

**ನಮ್ಮ ಮನೆಯಲ್ಲಿಯೇ ನೆಮ್ಮದಿಯಾಗಿ ಮಲಗಲಾಗುತ್ತಿಲ್ಲ. ಮನೆಯ ಮುಂದೆ ವಾಹನಗಳ ಹೆಚ್ಚಿನ ವೇಗ, ಕರ್ಕಶ ಹಾರನ್ ಇಂದಾಗಿ ನನಗೂ ಭಯವಾಗುತ್ತದೆ. ರಾತ್ರಿ ನಿದ್ದೆ ಬರುವುದಿಲ್ಲ. ಹಂಪ್ಸ್ ಹಾಕಿಸುವಂತೆ ದೂಡಾ ಇಲಾಖೆಗೆ ಹೇಳಿದ್ದೇನೆ ಎಂದು ಜಿಲ್ಲಾಧಿಕಾರಿ ಸಭೆಯಲ್ಲಿ ಹೇಳಿದರು.**

ಅಪಘಾತಗಳ ತಡೆಗೆ ಅವರ ಸಹಕಾರವೂ ಮುಖ್ಯ ಎಂದರು. 2022 ರಲ್ಲಿ ರಸ್ತೆ ಅಪಘಾತದಲ್ಲಿ 308, 2023 ರಲ್ಲಿ 293 ಮತ್ತು 2024 ರಲ್ಲಿ 283 ಮರಣಗಳು ಸಂಭವಿಸಿದ್ದು ಕಳೆದ ಮೂರು ವರ್ಷಗಳಲ್ಲಿ ಸರಾಸರಿ 57 ಅಪಘಾತ ಪ್ರಮಾಣ ಕಡಿಮೆಯಾಗಿವೆ. ಆದರೂ ಸಹ ಅಪಘಾತ ಪ್ರಮಾಣವನ್ನು ತೀವ್ರವಾಗಿ ತಗ್ಗಿಸಲು ರಸ್ತೆ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳು ಸಭೆಯನ್ನು ಕರೆದು ಪರಿಶೀಲನೆ ನಡೆಸಲಾಗುತ್ತದೆ ಎಂದರು.

ಜಿಲ್ಲೆಯಲ್ಲಿ ಈಗಾಗಲೇ ಅಪಘಾತ ವಲಯಗಳನ್ನು ಗುರುತಿಸಲಾಗಿದ್ದು ಒಂದೇ ಸ್ಥಳದಲ್ಲಿ ಹೆಚ್ಚು ಅಪಘಾತವಾಗಿರುವ ಸ್ಥಳಗಳನ್ನು ಗುರುತಿಸಿ ಅಲ್ಲಿ ರಸ್ತೆ ಅಭಿವೃದ್ದಿ, ವೇಗ ನಿಯಂತ್ರಕ, ಸೂಚನಾ ಫಲಕಗಳನ್ನು ಅಳವಡಿಸಲಾಗುತ್ತದೆ ಎಂದರು.

ಇದೇ ವೇಳೆ ನಗರ ಸಾರಿಗೆ ಬಸ್ ಹಾಗೂ ಹರಿಹರ-ದಾವಣಗೆರೆ ಮಾರ್ಗದ ಬಸ್‌ಗಳು ಸಿಗ್ನಲ್ ಗಳ ಬಳಿಯೇ ಪ್ರಯಾಣಿಕರನ್ನು ಇಳಿಸುತ್ತವೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಆಟೋ ಚಾಲಕರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಈ ವೇಳೆ ಸಂಚಾರಿ ಪೊಲೀಸರು, ನಗರ ಸಾರಿಗೆ ಬಸ್‌ಗಳು ಬಾಗಿಲುಗಳೇ ಮುಚ್ಚಿರುವುದಿಲ್ಲ ಎಂದರು.

ಸಾಮಾಜಿಕ ಸೇವಾ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್ ಮಾತನಾಡಿ, ಸಂಚಾರ ನಿರ್ವಹಣೆಗೆ ಮತ್ತೊಂದು ಲಯನ್ ವಾಹನದ ಅಗತ್ಯವಿದೆ ಎಂದರು. ಪಿಡಬ್ಲೂಡಿ ರಸ್ತೆಗಳು ಇದುವರೆಗೂ ಮಹಾನಗರ ಪಾಲಿಕೆಗೆ ಹಸ್ತಾಂತರವಾಗಿಲ್ಲ ಎಂದು ಸಭೆ ಗಮನಕ್ಕೆ ತಂದರು.

ನಗರದ ಹಲವೆಡೆ ಹಲವೆಡೆ ಬೀದಿ ದೀಪಗಳಿಲ್ಲ, ಎಲ್ಲೆಲ್ಲಿ ಬೀದಿ ದೀಪ ಅಗತ್ಯವಿದೆ ಎಂಬ ಪಟ್ಟಿ ಸಹಿತ ಮಹಾನಗರ ಪಾಲಿಕೆಗೆ ಪತ್ರ ಬರೆಯಲಾಗಿದ್ದರೂ ಕ್ರಮ ಕೈಗೊಂಡಿಲ್ಲ ಎಂದು ಎಸ್ಪಿ ಉಮಾ ಪ್ರಶಾಂತ್ ಹೇಳಿದರು.

ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

### ಕರ್ಕಶ ಹಾರನ್: ದಂಡ ವಿಧಿಸಲೂ ಸೂಚನೆ

**ಬಸ್, ಲಾರಿ ಸೇರಿದಂತೆ ವಾಹನಗಳಲ್ಲಿ ಕರ್ಕಶ ಹಾರ್‌ನ್ ಹೆಚ್ಚಾಗಿದೆ. ಅಂತಹ ವಾಹನಗಳನ್ನು ತಡೆದು ದಂಡ ವಿಧಿಸಿ ಎಂದು ಜಿಲ್ಲಾಧಿಕಾರಿಗಳು, ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.**

### ಬಸ್ ಹಿಂದೆ ಚಿತ್ರಗಳು...

**ಖಾಸಗಿ ಬಸ್‌ಗಳ ಹಿಂದೆ ಐಶ್ವರ್ಯ ರೈ ಚಿತ್ರ ಸೇರಿದಂತೆ ವಿವಿಧ ಚಿತ್ರಗಳನ್ನು ಅಳ ವಡಿಸಿರುತ್ತಾರೆ. ಇದೂ ಸಹ ಅಪಘಾತ ಗಳಿಗೆ ಕಾರಣವಾಗುತ್ತದೆ. ಇಂತಹ ವಾಹನ ಮಾಲೀಕರಿಗೆ ಶೋಕಾಸ್ ನೋಟೀಸ್ ನೀಡಿ ಎಂದು ಜಿಲ್ಲಾಧಿಕಾರಿ ತಾಕೀತು ಮಾಡಿದರು.**

# ಡಬ್ಲ್ಯೂಹೆಚ್‌ಓ ತೊರೆಯಲು ಘೋಷಣೆ

## ಅಮೆರಿಕದ ಅಧ್ಯಕ್ಷ ಟ್ರಂಪ್ ನಿರ್ಧಾರಕ್ಕೆ ಚೀನಾ ದೃಢ ಬೆಂಬಲ

ಬೀಜಿಂಗ್, ಜ. 21- ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿಶ್ವ ಸಂಸ್ಥೆಯ ಆರೋಗ್ಯ ಸಂಘಟನೆ ಯಾದ ಡಬ್ಲ್ಯೂ.ಹೆಚ್.ಓ. ದಿಂದ ಹೊರಬರುವುದಾಗಿ ಘೋಷಣೆ ಮಾಡಿದ್ದಾರೆ. ವಿಶ್ವ ಆರೋಗ್ಯ ಸಂಘಟನೆಗೆ ಪೂರ್ಣ ಬೆಂಬಲ ನೀಡುವುದಾಗಿ ಚೀನಾ ಘೋಷಿಸಿದೆ.

ಸೋಮವಾರ ಪ್ರಮಾಣವಚನ ಸ್ವೀಕರಿಸಿದ ನಂತರ ಟ್ರಂಪ್ ಅವರು ಕಾರ್ಯಕಾರಿ ಆದೇಶವೊಂದನ್ನು ಹೊರಡಿಸಿದ್ದು ಡಬ್ಲ್ಯೂ.ಹೆಚ್.ಓ.ದಿಂದ ಅಮೆರಿಕ ಹೊರಬರುವ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ. ಕಳೆದ ಐದು ವರ್ಷಗಳಲ್ಲಿ ವಿಶ್ವ ಆರೋಗ್ಯ ಸಂಘಟನೆಯಿಂದ ಅಮೆರಿಕ ಹೊರ ಬರುತ್ತಿರುವುದು ಇದು ಎರಡನೇ ಬಾರಿ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಗುವಾ ಜೈಕುನ್, ಚೀನಾ ವಿಶ್ವ ಆರೋಗ್ಯ ಸಂಘಟನೆಗೆ ಬೆಂಬಲ ನೀಡುವ ತನ್ನ ಕರ್ತವ್ಯ ಮುಂದುವರಿಸಲಿದೆ ಎಂದಿದ್ದಾರೆ.

ಜಾಗತಿಕ ಆರೋಗ್ಯ ವಿಷಯದಲ್ಲಿ ಈ ಸಂಘಟನೆ ಸಮನ್ವಯದ ಪಾತ್ರ ನಿರ್ವಹಿಸುತ್ತಿದೆ. ಈ ಸಂಘಟನೆಯನ್ನು ಬಲಗೊಳಿಸಬೇಕೇ ಹೊರತು ದುರ್ಬಲಗೊಳಿಸಬಾರದು ಎಂದು ಗುವಾ ಹೇಳಿದ್ದಾರೆ.

ವಿಶ್ವ ಆರೋಗ್ಯ ಸಂಘಟನೆಯನ್ನು ಟ್ರಂಪ್ ಈ ಹಿಂದಿನಿಂದಲೂ ಟೀಕಿಸುತ್ತಾ ಬಂದಿದ್ದರು. ಮೊದಲ ಅವಧಿಗೆ ಅಧ್ಯಕ್ಷರಾದ ಸಂದರ್ಭದಲ್ಲಿ ಅವರು ಅಮೆರಿಕವನ್ನು ಸಂಘಟನೆಯಿಂದ ಹೊರ ತಂದಿದ್ದರು.

ಆದರೆ ನಂತರ ಜೋ ಬಿಡೆನ್ ಮತ್ತೆ ಆರೋಗ್ಯ ಸಂಘಟನೆಗೆ ಸೇರ್ಪಡೆಯಾಗಿದ್ದರು.


2020ರಲ್ಲಿ ಚೀನಾದಿಂದ ಹೊರ ಬಂದಿದ್ದ ಕೊರೋನಾ ಮಹಾಮಾರಿಯನ್ನು ವಿಶ್ವ ಆರೋಗ್ಯ ಸಂಘಟನೆ ಸಮರ್ಪಕವಾಗಿ ನಿಭಾಯಿಸಿರಲಿಲ್ಲ. ಇದರಿಂದ ಜಾಗತಿಕ ಆರೋಗ್ಯ ಬಿಕ್ಕಟ್ಟು ಉಂಟಾಗಿತ್ತು. ವಿಶ್ವ ಆರೋಗ್ಯ ಸಂಘಟನೆಯಲ್ಲಿ ತುರ್ತು ಸುಧಾರಣೆಯ ಅಗತ್ಯವಿದೆ ಎಂದು ಟ್ರಂಪ್ ಹೊರಡಿಸಿರುವ ಕಾರ್ಯಕಾರಿ ಆದೇಶದಲ್ಲಿ ತಿಳಿಸಲಾಗಿದೆ. ಚೀನಾದ ವುಹಾನ್ ಪ್ರ ಯೋಗಾಲಯದಿಂದ ಕೊರೊನಾ ವೈರಸ್ ಸೋರಿಕೆ ಯಾಗಿದೆ ಎಂದು ಟ್ರಂಪ್ ಆರೋಪಿಸಿದ್ದರು. ಈ ಹೇಳಿಕೆ ವಿರುದ್ಧ ಚೀನಾ ತೀವ್ರ ಪ್ರಚಾರ ಅಭಿಯಾನ ನಡೆಸಿತ್ತು.

# ಹರಿಹರದಲ್ಲಿ ನಾಳೆ ದೂಡಾದಿಂದ ಜನ ಸಂಪರ್ಕ ಸಭೆ

ದಾವಣಗೆರೆ, ಜ. 21- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಾಡಿದ್ದು ದಿನಾಂಕ 23ರ ಗುರುವಾರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ದಿನೇಶ್ ಕೆ. ಶೆಟ್ಟಿ ಅವರ ನೇತೃತ್ವದಲ್ಲಿ ಜನ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿದೆ. ಹರಿಹರ ನಗರದ ಸುತ್ತಮುತ್ತಲಿನ ಜನರು ಈ ಜನ ಸಂಪರ್ಕ ಸಭೆಯನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿ ದೂಡಾ ಆಯುಕ್ತ ಹುಲ್ಮನೆ ತಿಮ್ಮಣ್ಣ ತಿಳಿಸಿದ್ದಾರೆ.

# ನಗರದಲ್ಲಿ ನಾಳೆ ಸಿದ್ಧ ಕಣ್ಣಿನ ಹನಿ

ದಾವಣಗೆರೆ, ಜ.21- ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ನಾಡಿದ್ದು ದಿನಾಂಕ 23 ರ ಗುರುವಾರ ಬೆಳಿಗ್ಗೆ 10 ರಿಂದ 12 ರವರೆಗೆ ಹಾಗೂ ಹರಿಹರ ಸಮೀಪದ ಕೋಡಿಯಾಲ - ಹೊಸಪೇಟೆಯ ಪುಣ್ಯಕೋಟಿ ಮಠದಲ್ಲಿ ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.



ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸ ಬಹುದು. ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676 - 91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಹರಿಹರ ಎಂ.ಹೆಚ್. ಶಿವಯೋಗಿಶ್ವರ ಸ್ವಾಮಿ (94483 39424) ಅವರನ್ನು ಸಂಪರ್ಕಿಸಬಹುದು.

# ಮಹಿಳೆಯರ ಆರೋಗ್ಯ ವಲಯದಲ್ಲಿ ಹೂಡಿಕೆಗೆ ಡಬ್ಲ್ಯೂ.ಇ.ಎಫ್. ಕರೆ

ದಾವೋಸ್, ಜ. 21- ಮಹಿಳೆಯರ ಆರೋಗ್ಯದಲ್ಲಿ ಇರುವ ಅಂತರವನ್ನು ನಿವಾರಿಸಿದರೆ, 2040ರ ವೇಳೆಗೆ ಜಾಗತಿಕ ಜಿಡಿಪಿಯಲ್ಲಿ 400 ಶತಕೋಟಿ ಡಾಲರ್ ಹೆಚ್ಚಳವಾಗಲಿದೆ ಎಂದು ಡಬ್ಲ್ಯೂ.ಇ.ಎಫ್. ತಿಳಿಸಿದೆ.

ಇಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯ ಸಭೆಯಲ್ಲಿ ಮಹಿಳೆಯರ ಆರೋಗ್ಯದಿಂದ ಆಗುವ ಪರಿಣಾಮ ಗಳನ್ನು ಗುರುತಿಸುವ ವ್ಯವಸ್ಥೆಯೊಂದನ್ನು ಪ್ರಕಟಿಸಲಾಗಿದೆ. ವಿಶ್ವದಾದ್ಯಂತ ಲಕ್ಷಾಂ ತರ ಮಹಿಳೆಯರು ಎದುರಿಸುತ್ತಿರುವ ಆರೋಗ್ಯ ಸಮಸ್ಯೆಗಳನ್ನು ಗುರುತಿಸಿ, ಪರಿಹಾರ ಕಂಡುಕೊಳ್ಳಲು ಈ ವ್ಯವಸ್ಥೆ ರೂಪಿಸಲಾಗಿದೆ. ಮಹಿಳೆಯರ ಆರೋ ಗ್ಯ ಹಾಗೂ ಅದರಿಂದ ಆರ್ಥಿಕತೆಯ ಮೇಲೆ ಆಗುವ ಪರಿಣಾಮಗಳ ಕುರಿತು ವಿಶ್ವ ಆರ್ಥಿಕ ವೇದಿಕೆಯು ಮೆಕೆನ್‌ಸ್ಲೇ ಹೆಲ್ತ್ ಇನ್‌ಸ್ಟಿಟ್ಯೂಟ್ ಜೊತೆಗೂಡಿ ವರದಿಯನ್ನು ರೂಪಿಸಿದೆ.

### ಆರೋಗ್ಯವಂತ ಮಹಿಳೆಯರಿಂದ ಬಲಿಷ್ಠ ಆರ್ಥಿಕ ವ್ಯವಸ್ಥೆ

ಪುರುಷರಿಗೆ ಹೋಲಿಸಿದರೆ ಮಹಿಳೆಯರು ತಮ್ಮ ಜೀವನದ ಶೇಕಡ 25ರಷ್ಟು ಹೆಚ್ಚು ಅವಧಿಯನ್ನು ಅನಾರೋಗ್ಯದಿಂದ ಕಳೆಯುತ್ತಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಒಂಭತ್ತು ಆರೋಗ್ಯ ಮಾನದಂಡಗಳ ಆಧಾರದ ಮೇಲೆ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯ ಇದೆ ಎಂದು ವರದಿ ತಿಳಿಸಿದೆ.

ಈ ಕ್ರಮಗಳ ಕಾರಣದಿಂದಾಗಿ ಪ್ರತಿವರ್ಷ ಮಹಿಳೆಯರಿಗೆ 2.5 ಆರೋಗ್ಯ ದಿನಗಳು ದೊರೆಯಲಿವೆ ಎಂದು ವರದಿ ತಿಳಿಸಿದೆ. ಇದು ಒಟ್ಟಾರೆ ಜಾಗತಿಕವಾಗಿ 27 ದಶಲಕ್ಷ ವರ್ಷಗಳಾಗಲಿವೆ.

# ಟರ್ಕಿ ಹೋಟೆಲ್‌ನಲ್ಲಿ ಬೆಂಕಿ 66 ಸಾವು

ಅಂಕಾರ, ಜ. 21- ಟರ್ಕಿಯ ವಾಯುವ್ಯ ಭಾಗದಲ್ಲಿರುವ ಸ್ಕೈ ರೆಸಾರ್ಟ್‌ನ ಹೋಟೆಲ್ ಒಂದರಲ್ಲಿ ಬೆಂಕಿ ಕಾಣಿಸಿಕೊಂಡು ಕನಿಷ್ಠ 66 ಜನ ಸಾವನ್ನಪ್ಪಿದ್ದಾರೆ ಹಾಗೂ ಇತರ 51 ಜನ ಗಾಯಗೊಂಡಿದ್ದಾರೆ. ಕಾರ್ತಲ್ ಕಯ ಎಂಬಲ್ಲಿರುವ 12 ಅಂತಸ್ತು ಗ್ರಾಂಡ್ ಕರ್ತಲ್ ಹೋಟೆಲ್‌ನಲ್ಲಿ ಬೆಳಿಗ್ಗೆ 3.30ರ ಸಮಯದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಆ ಸಂದರ್ಭದಲ್ಲಿ ಹೋಟೆಲ್‌ನಲ್ಲಿ 234 ಅತಿಥಿಗಳಿದ್ದರು.


# ಬೆಂಗಳೂರು ಕ.ನಿ.ನಿ.ನಿ ಕಚೇರಿ ದಾವಣಗೆರೆಗೆ ಸ್ಥಳಾಂತರಿಸಲು ಆಗ್ರಹ

ದಾವಣಗೆರೆ, ಜ.21- ಬೆಂಗಳೂರಿನಲ್ಲಿರುವ ಕರ್ನಾಟಕ ನೀರಾವರಿ ನಿಗಮ ನಿಯಮಿತ ಕಚೇರಿಯನ್ನು ಕೂಡಲೇ ದಾವಣಗೆರೆಗೆ ಸ್ಥಳಾಂತರಿಸಿ, ಕಾರ್ಯಾರಂಭಿಸಬೇಕು ಎಂದು ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಷ್ಠಾನ ಹಾಗೂ ಜಿಲ್ಲಾ ಸಾರ್ವಜನಿಕರ ಹಿತರಕ್ಷಣಾ ಒಕ್ಕೂಟವು ಸರ್ಕಾರಕ್ಕೆ ಒತ್ತಾಯಿಸಿದೆ.

ರೈತಾಪಿ ವರ್ಗದವರಿಗೆ ಅನುಕೂಲವಾಗಲೆಂದು ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿನ ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಕಚೇರಿಯನ್ನು ಅಧಿಕಾರಿ ಹಾಗೂ ಸಿಬ್ಬಂದಿ ಸಹಿತ ಮಧ್ಯ ಕರ್ನಾಟಕದ ದಾವಣಗೆರೆಗೆ ಸ್ಥಳಾಂತರಿ ಸುವಂತೆ ಸರ್ಕಾರವೇ ಆದೇಶಿಸಿದರೂ ಇಂದಿಗೂ ಸ್ಥಳಾಂತರವಾಗಿಲ್ಲ.

ಆದೇಶ ಸಂಖ್ಯೆ : ಜಸಂಇ333 ಎಸ್‌ಎಎಸ್ 2021ರ ಪ್ರಕಾರ 2022ರ ಜೂನ್ 23ರಂದೇ ಸರ್ಕಾರ ಆದೇಶ ಹೊರಡಿಸಿದೆ. ಆದೇಶ ನೀಡಿ 4 ವರ್ಷಗಳೇ ಕಳೆದರೂ ಸ್ಥಳಾಂತರವಾಗದ ಬಗ್ಗೆ ಜಿಲ್ಲೆಯ ಜನರು ಅಧಿಕಾರಿಗಳ ನಿರ್ಲಕ್ಷ್ಯವನ್ನು ಖಂಡಿಸುತ್ತಿದ್ದಾರೆ ಎಂದು ಒಕ್ಕೂಟ ಹೇಳಿದೆ.

# ಜಿಹ್ವೇಶ್ವರ ಮಂದಿರದಲ್ಲಿಂದು ರಾಮ ಪೂಜೆ



ಹೊಂಡದ ಸರ್ಕಲ್‌ನಲ್ಲಿನ ಸ್ವಕುಳಸಾಳಿ ಸಮಾಜದ ಜಿಹ್ವೇಶ್ವರ ಮಂದಿರದಲ್ಲಿ ಅಯೋಧ್ಯ ಶ್ರೀ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆ ಯಾಗಿ ಒಂದು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಶ್ರೀ ರಾಮನ ಪೂಜೆ ನಡೆಸಲಾಗುವುದು.ಈ ವರ್ಷ ಮಹಿಳಾ ಮಂಡಲದ ವತಿಯಿಂದ ಸಮಾಜದ ಮನೆಯಲ್ಲಿ ಶ್ರೀ ರಾಮನ ಪೂಜೆ ನಡೆಯಲಿದೆ. ಶ್ರೀ ರಾಮನ ನಾಮಜಪ, ಮಹಾಮಂಗಳಾರತಿ, ಪ್ರಸಾದ ವಿತರಣೆ ನಡೆಯುವುದು ಎಂದು ಸ್ವಕುಳ ಸಾಳಿ ಸಮಾಜದ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಸುಜಾತ ರೋಖಡೆ ತಿಳಿಸಿದ್ದಾರೆ.

# ಎಐಸಿಟಿಇ ಐಡಿಯಾ ಲ್ಯಾಬ್ ಯೋಜನೆ ಅಡಿಯಲ್ಲಿ ಜೈನ್ ಕಾಲೇಜಿಗೆ ಅನುದಾನ

ದಾವಣಗೆರೆ, ಜ. 21- ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು ಎಐಸಿಟಿಇ ಐಡಿಯಾ ಲ್ಯಾಬ್ ಯೋಜನೆ ಅಡಿಯಲ್ಲಿ ಆಯ್ಕೆಯಾಗಿದೆ. ಈ ಯೋಜನೆಯಡಿ ಸಂಸ್ಥೆಗೆ ವಿದ್ಯಾರ್ಥಿಗಳ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಿ ತಾಂತ್ರಿಕತೆಯ ಹೊಸ ಕಲ್ಪನೆಗಳನ್ನು ರೂಪಿಸಲು ಬೇಕಾಗುವ ಪರಿಕರಗಳಿಗೆ ಅನುದಾನವನ್ನು ಕೊಡಲಾಗುವುದು. ಈ ಯೋಜನೆಯ ಉದ್ದೇಶ, ಕಾಲೇಜಿನ ವಿದ್ಯಾರ್ಥಿಗಳ ನೈಪುಣ್ಯತೆಯ ಅಭಿವೃದ್ದಿಗೆ ನೆರವು ನೀಡುವುದಾಗಿದ್ದು, ಈ ಅನುದಾನವನ್ನು ವೈಜ್ಞಾನಿಕತೆ ಮತ್ತು ತಾಂತ್ರಿಕತೆಯ ಕಲ್ಪನೆಗಳ ಉತ್ತೇಜನಕ್ಕಾಗಿ ಹೊಸ ಆವಿಷ್ಕಾರ ಮತ್ತು ಪ್ರಯೋಗಶೀಲತೆಯ ಪ್ರೇರಣೆಗೆ ಬಳಸಲಾಗುವುದು. ಈ ಯೋಜನೆಯು ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಭಾವವನ್ನು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಮತ್ತಷ್ಟು ವಿಸ್ತರಿಸಲಿದೆ. ನವೋದ್ಯಮವನ್ನು ಉತ್ತೇಜಿಸುವ ಜೊತೆಗೆ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣದ ಅನುಭವವನ್ನು ನೀಡಲು ಈ ಯೋಜನೆ ನೆರವಾಗಲಿದೆ.

ಸಂಸ್ಥೆಯ ಪ್ರಾಚಾರ್ಯ ಡಾ. ಗಣೇಶ್ ಡಿ.ಬಿ, ಸಂಸ್ಥೆಯ ಸಲಹೆಗಾರ ಡಾ. ಮಂಜಪ್ಪ ಸಾರಥಿ ಮತ್ತು ಸಂಯೋಜಕ ಡಾ. ಸಂತೋಷ್ ಎಂ. ನೇಜಕಾರ್ ಯೋಜನೆಯ ಯಶಸ್ವೀ ನಿರ್ವಹಣೆಗೆ ಮುಂದಾಗಿದ್ದಾರೆ.

# ನಿಟುವಳ್ಳಿಗೆ ಇಂದು ಪಾರಂಪರಿಕ ವೈದ್ಯ ಮಹದೇವಯ್ಯ

ನಿಟುವಳ್ಳಿಯ ಹೆಚ್.ಕೆ. ಆರ್. ಸರ್ಕಲ್ ಹತ್ತಿರದ ಪತಂಜಲಿ ವೆಲ್ನೆಸ್ ಸೆಂಟರ್‌ಗೆ ಇಂದು ಮಧ್ಯಾಹ್ನ 3 ಗಂಟೆಗೆ ಕುದೂರಿನ ಮೂಳೆ ತಜ್ಞರೂ, ಪಾರಂಪರಿಕ ವೈದ್ಯರೂ ಆದ ಮಹದೇವಯ್ಯ ಅವರು ಭೇಟಿ ನೀಡಲಿದ್ದಾರೆ. ಮಹಾದೇವಯ್ಯ ಅವರು ಮೂಳೆ ಮುರಿತ, ಟೆನಿಸ್ ಎಲ್ಬೋ, ಸೊಂಟ ನೋವು, ಕುತ್ತಿಗೆ ನೋವು, ಭುಜ ನೋವು ಮುಂತಾದ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲಿದ್ದಾರೆ ಎಂದು ಜಿಲ್ಲಾ ಸಂಚಾಲಕರಾದ ಕೆ.ಎಂ. ಪುಷ್ಪಲತಾ (8310748946, 9880107918) ತಿಳಿಸಿದ್ದಾರೆ.


## ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಾವಣಗೆರೆ ತಾಲ್ಲೂಕು, ಮುದಹದಡಿ ಗ್ರಾಮದ ಸರ್ವೆ ನಂ.11/2 ರ ಬಿ.ಹೆಚ್ ಮಹೇಶ್ ಬಿನ್ ಹಿಂದ್ಲ ಮನೆ ಬಸಪ್ಪ ನನ್ನ ಮಾಲೀಕತ್ವ ಮತ್ತು ಸ್ವಾಧೀನದಲ್ಲಿರುವ ಆಸ್ತಿಗೆ ಸಂಬಂಧಿಸಿದಂತೆ ನನ್ನ ಸಹೋದರನಾದ ಶ್ರೀ ಹೆಚ್.ವೀರಕುಮಾರ್ ಇವರ ಪರವಾಗಿ ದಿ: 06.12.2014 ರಂದು ಬರೆದುಕೊಟ್ಟಿದ್ದ ಜನರಲ್ ಪವರ್ ಆಫ್ ಅಟಾರ್ನಿ ಪತ್ರವನ್ನು ಈ ಮೂಲಕ ಈ ದಿನದಿಂದಲೇ ಜಾರಿಗೊಳ್ಳುವಂತೆ ರದ್ದುಪಡಿಸಿರುತ್ತೇನೆ. ಆದ ಕಾರಣ ಈ ಆಸ್ತಿಗೆ ಸಂಬಂಧಿಸಿದಂತೆ ಯಾರು ಯಾವುದೇ ರೀತಿಯ ವ್ಯವಹರಣೆಯನ್ನು ಮಾಡಬಾರದಾಗಿ ಸಾರ್ವಜನಿಕರಲ್ಲಿ ವಿನಂತಿಸುತ್ತೇನೆ ಹಾಗೂ ಮಾಡಿದಲ್ಲಿ ಅವರೇ ಹೊಣೆಗಾರರಾಗುತ್ತಾರೆ.

ಅರ್ಜಿದಾರರು
**ಶ್ರೀ ಬಿ.ಹೆಚ್.ಮಹೇಶ್,**
ಬಿನ್ ಹಿಂದ್ಲಮನೆ ಬಸಪ್ಪ, ಮುದಹದಡಿ ಗ್ರಾಮ,
ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

ಅರ್ಜಿದಾರರ ಪರ ವಕೀಲರು
ಸಹಿ/- ಎಂ.ಸಿ.ಎಂ. ತೀರ್ಥಪ್ಪ

ಸ್ಥಳ : ದಾವಣಗೆರೆ
ದಿನಾಂಕ : 20.01.2025

## ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.ದಾವಣಗೆರೆ.

ಮಾನ್ಯ ಮತದಾರರೇ, ದಿನಾಂಕ : 24.01.2025ನೇ ಶುಕ್ರವಾರ ಬೆಳಿಗ್ಗೆ 9 ರಿಂದ ಸಂಜೆ 4ರವರೆಗೆ 5 ವರ್ಷಗಳ ಅವಧಿಗೆ ನಡೆಯಲಿರುವ ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪ್ ಸೊ.ಲಿ., ದಾವಣಗೆರೆ ಇದರ ಆಡಳಿತ ಮಂಡಳಿ ಸದಸ್ಯರ ಚುನಾವಣೆಗೆ **ಬಿ.ಸಿ. ಶಿವಲಿಂಗಪ್ಪ** ಆದ ನಾನು ಅಭ್ಯರ್ಥಿಯಾಗಿ ಸ್ಪರ್ಧಿಸಿರುತ್ತೇನೆ. ನನ್ನ ಗುರುತು **'ಡಿಶ್ ಎಂಟಿನಾ'** ಗುರುತಿಗೆ ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡಿ ನನ್ನನ್ನು ಜಯಶೀಲರನ್ನಾಗಿ ಮಾಡಿ ತಮ್ಮಗಳ ಸೇವೆ ಮತ್ತು ಬ್ಯಾಂಕ್ ಅಭಿವೃದ್ಧಿ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಸವಿನಯ ಪ್ರಾರ್ಥನೆ.

| ಕ್ರ.ಸಂ. | ನನ್ನ ಹೆಸರು | ಚಿನ್ಹೆ | ಗುರುತು |
|---|---|---|---|
| 09 | ಬಿ.ಸಿ. ಶಿವಲಿಂಗಪ್ಪ | | |

## ಕ್ರಯಪತ್ರ ಕಳೆದಿದೆ

ಚನ್ನಗಿರಿ ತಾಲ್ಲೂಕು ಸಂತೇಬೆನ್ನೂರು ಹೋಬಳಿ ಸಿದ್ದನಮಠ ಗ್ರಾಮದ ವಾಸಿ ಶ್ರೀಮತಿ ರುದ್ರಮ್ಮ ಇವರಿಗೆ ಸಂಬಂಧಿಸಿದ ಸರ್ವೆ ನಂ. 66 ವಿಸ್ತೀರ್ಣ 0-05.08 ಗುಂಟೆ ಜಮೀನಿಗೆ ಸಂಬಂಧಿಸಿದ ಮೂಲ ಕ್ರಯ ಪತ್ರವು ಗ್ರಾಮದ ನಮ್ಮ ಮನೆಯನ್ನು ಬದಲಾಯಿಸುವಾಗ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಲ್ಲಿ ಇವರಿಗೆ ತಲುಪಿಸಬೇಕಾಗಿ ವಿನಂತಿ.

ಶ್ರೀಮತಿ ರುದ್ರಮ್ಮ
ಸಿದ್ದನಮಠ ಗ್ರಾಮ, ಚನ್ನಗಿರಿ ತಾಲ್ಲೂಕು. ಮೊ. 73383 85698

## ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ

ಮಾನ್ಯ ಬಂಧುಗಳೇ, **ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ - 2025**

ದಿನಾಂಕ 24-01-2025ನೇ ಶುಕ್ರವಾರದಂದು ನಡೆಯಲಿರುವ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ನಾವುಗಳು ಅಭ್ಯರ್ಥಿಗಳಾಗಿ ಸ್ಪರ್ಧಿಸಿರುತ್ತೇವೆ. ತಾವುಗಳು ತಮ್ಮ ಅತ್ಯಮೂಲ್ಯವಾದ ಮತಗಳನ್ನು ನೀಡುವುದರ ಮೂಲಕ ಎಲ್ಲಾ 8 (ಎಂಟು) ಅಭ್ಯರ್ಥಿಗಳನ್ನು ಅತ್ಯಂತ ಬಹುಮತದಿಂದ ಜಯಶೀಲರನ್ನಾಗಿ ಮಾಡಬೇಕಾಗಿ ತಮ್ಮಲ್ಲಿ ಸವಿನಯ ಪ್ರಾರ್ಥನೆ.

**ಮಾದರಿ ಮತ ಪತ್ರ**

**ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆ 07 ಸಾಮಾನ್ಯ ಕ್ಷೇತ್ರಕ್ಕೆ**

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | |
|---|---|---|---|
| 1 | ಕೆ.ಬಿ. ನಾಗರಾಜ್ | | |
| 2 | ಪ್ರಕಾಶ್ ವಿ. | | |
| 3 | ಬ್ರಹ್ಮಾನಂದ ರೆಡ್ಡಿ ಡಿ. | | |
| 4 | | | |
| 5 | ಯೋಗಿ ರೆಡ್ಡಿ ಬಿ. | | |
| 6 | ವೆಂಕಟ ರೆಡ್ಡಿ ಆರ್. | | |
| 7 | ಬಿ. ವೆಂಕಟೇಶ್ವರ ರೆಡ್ಡಿ ಬಿನ್ ನರಸಾ ರೆಡ್ಡಿ | | |
| 8 | ಬಿ. ವೆಂಕಟೇಶ್ವರ ರೆಡ್ಡಿ ಬಿನ್ ಬಿ. ವೆಂಕಟ ರೆಡ್ಡಿ | | |
| 9 | | | |

**ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆ 01 ಹಿಂದುಳಿದ ವರ್ಗ ಪ್ರವರ್ಗ 'ಎ' ಮೀಸಲು ಕ್ಷೇತ್ರಕ್ಕೆ**

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | |
|---|---|---|---|
| 1 | ಆನಂದ ಎನ್. | | |
| 2 | | | |

ಮತದಾನ ದಿನಾಂಕ : 24-01-2025ನೇ ಶುಕ್ರವಾರ
ಮತದಾನದ ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 4-00ರ ವರೆಗೆ
ಸ್ಥಳ : ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ, 16ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೆ.ಟಿ.ಜೆ. ನಗರ, ದಾವಣಗೆರೆ.

ಈ ಮೇಲ್ಕಂಡ 8 ಗುರುತುಗಳಿಗೆ ತಮ್ಮ ಅಮೂಲ್ಯವಾದ ಮತಗಳನ್ನು ನೀಡುವುದರ ಮೂಲಕ ನಮ್ಮನ್ನು ಜಯಶೀಲರನ್ನಾಗಿ ಮಾಡಬೇಕಾಗಿ ಪ್ರಾರ್ಥನೆ.

ವಿಶೇಷ ಸೂಚನೆ : ಸೊಸೈಟಿಯ ಗುರುತಿನ ಚೀಟಿ (Identity Card) ಯನ್ನು ತಪ್ಪದೇ ತರಬೇಕಾಗಿ ವಿನಂತಿ.

# ಜಿಲ್ಲಾ ಸಹಕಾರ ಒಕ್ಕೂಟಕ್ಕೆ ಅಧ್ಯಕ್ಷರಾಗಿ ಸಿರಿಗೆರೆ ರಾಜಣ್ಣ ಪುನರಾಯ್ಕೆ



## ಉಪಾಧ್ಯಕ್ಷರಾಗಿ ಬೆನಕನಹಳ್ಳಿಯ ಮಂಜುಳಾ ಗಣೇಶ್ ಆಯ್ಕೆ

ದಾವಣಗೆರೆ, ಜ. 21- ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾಗಿ ಮಲೇಬೆನ್ನೂರಿನ ಸಿರಿಗೆರೆ ರಾಜಣ್ಣ ಮತ್ತು ಉಪಾಧ್ಯಕ್ಷರಾಗಿ ಹೊನ್ನಾಳಿ ತಾಲ್ಲೂಕು ಬೆನಕನಹಳ್ಳಿಯ ಶ್ರೀಮತಿ ಮಂಜುಳಾ ಹೆಚ್.ಜಿ. ಗಣೇಶ್ ಅವರು ಮಂಗಳವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ದಾವಣಗೆರೆ-ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಸಮುದಾಯ ಭವನದಲ್ಲಿರುವ ಸಹಕಾರ ಒಕ್ಕೂಟದ ಕಛೇರಿಯಲ್ಲಿ ಈ ಆಯ್ಕೆ ಪ್ರಕ್ರಿಯೆ ನಡೆಯಿತು. ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀಮತಿ ಮಂಜುಳಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಸೂಚನೆ ಮೇರೆಗೆ ಒಕ್ಕೂಟದ ನಿರ್ದೇಶಕರಾದ ಜೆ.ಆರ್. ಷಣ್ಮುಖಪ್ಪ, ಆರ್.ಜಿ. ಶ್ರೀನಿವಾಸಮೂರ್ತಿ, ಹೆಚ್.ಆರ್. ಸಿದ್ದೇಶ್, ಕೆ.ಜಿ. ಸುರೇಶ್, ಎಸ್. ದೀಪಕ್ ಪಟೇಲ್, ಕೆಂಚನಹಳ್ಳಿ ಮಹೇಶ್, ಕೆಂಗಲಹಳ್ಳಿ ಷಣ್ಮುಖಪ್ಪ, ಎಸ್.ಜಿ. ಸತೀಶ್, ಎಂ.ಜಿ. ಷಣ್ಮುಖಪ್ಪ, ಶ್ರೀಮತಿ ನಿರ್ಮಲ ಎನ್.ವಿ. ಸುಭಾಷ್ ಚಂದ್ರ, ಇ. ಬಸವರಾಜ್ ಈ ವೇಳೆ ಹಾಜರಿದ್ದು, ನೂತನ ಅಧ್ಯಕ್ಷ-ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಿದರು. ಒಕ್ಕೂಟದ ಪದನಿಮಿತ್ತ ನಿರ್ದೇಶಕರೂ ಆದ ಸಹಕಾರ ಸಂಘಗಳ ಉಪನಿಬಂಧಕರಾದ ಟಿ. ಮಧು ಶ್ರೀನಿವಾಸ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಲಪ್ಪ ಕೋಡಿಹಳ್ಳಿ, ವ್ಯವಸ್ಥಾಪಕ ಕೆ.ಎಂ. ಜಗದೀಶ್, ಜಿಲ್ಲಾ ಸಹಕಾರ ಶಿಕ್ಷಕ ಕೆ.ಹೆಚ್. ಸಂತೋಷ್‌ಕುಮಾರ್, ಕಛೇರಿಯ ವಿ. ರಂಗನಾಥ್, ಕೆ.ಆರ್. ಸ್ವಾಮಿ ಈ ವೇಳೆ ಹಾಜರಿದ್ದರು.

# ನಗರಕ್ಕೆ ಇಂದು ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯ ರೆಡ್ಡಿ



ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಮಹಿಳಾ ಘಟಕ ರಾಜ್ಯ ಅಧ್ಯಕ್ಷರಾದ ಸೌಮ್ಯ ರೆಡ್ಡಿ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಬೆಳಗ್ಗೆ 10.30ಕ್ಕೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಅನಿತಾಬಾಯಿ ಮಾಲತೇಶರಾವ್ ಜಾಧವ್ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಅವರು ಭಾಗವಹಿಸುವರು.





## ದೊಡ್ಡಬಾತಿ : ಇಂದು ಉಡುಸಲಮ್ಮ ಜಾತ್ರೆ

ದಾವಣಗೆರೆ ತಾಲ್ಲೂಕು ದೊಡ್ಡಬಾತಿಯಲ್ಲಿ ಕಳೆದ ಎರಡು ದಿನಗಳಿಂದ ಶ್ರೀ ಉಡುಸಲಮ್ಮ ದೇವಿಯ ಜಾತ್ರಾ ಮಹೋತ್ಸವ ವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಇಂದು ಬೆಳಗಿನ ಜಾವ ಕಣಕದಿಂದ ನಿರ್ಮಿಸಿದ ಕೋಣವನ್ನು ತಳವಾರ ಮನೆಯವರಿಂದ ವಧಿಸುವುದು. ಚರಗದ ಮುಂದೆ ಸಾರು ಹಾಕುವವರು ಕಾಳೇರ ಮನೆಯವರು ಮತ್ತು ಚರಗದಿಂದ ಗ್ರಾಮಕ್ಕೆ ಶಾಂತಿ ಮಾಡುವುದು. ರಾತ್ರಿ 8.30ಕ್ಕೆ ಹುಲುಸಿನ ಜೋಳವನ್ನು ಬಣಕಾರರಿಂದ ಊರ ಗ್ರಾಮಸ್ಥರಿಗೆ ವಿತರಿಸಲಾಗುವುದು ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

## ನಗರದಲ್ಲಿ ನಾಡಿದ್ದು ಉದ್ಯೋಗ ಮೇಳ

ದಾವಣಗೆರೆ, ಜ.21- ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಾದರಿ ವೃತ್ತಿ ಕೇಂದ್ರ, ಇವರ ವತಿಯಿಂದ ಇದೇ ದಿನಾಂಕ 24 ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದು ಉದ್ಯೋಗಾಧಿಕಾರಿ ಡಿ. ರವೀಂದ್ರ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 7483808321.




**ಬೇಕಾಗಿದ್ದಾರೆ**

ಆಫೀಸಿನಲ್ಲಿ ಕೆಲಸಕ್ಕೆ ಅಟೆಂಡರ್ಸ್ (ಹುಡುಗರು) ಬೇಕಾಗಿದ್ದಾರೆ.

ಊಟ, ವಸತಿ, ಸಂಬಳ ಕೊಡುತ್ತೇವೆ.
ಸ್ಥಳ : ಮೈಸೂರು (ವಿದ್ಯಾಸಂಸ್ಥೆಗೆ)
ವಯಸ್ಸು : 35 ವರ್ಷದ ಒಳಗಿನವರು ಮಾತ್ರ

ಕರೆ ಮಾಡಿ :
9964801496


## ಆವರಗೊಳ್ಳ ಪೂಜ್ಯರಿಂದ ಎಸ್ಸೆಸ್ ಅವರಿಗೆ ಆಶೀರ್ವಾದ





ಆವರಗೊಳ್ಳ ಪುರವರ್ಗ ಹಿರೇಮಠದ ಪೂಜ್ಯ ಶ್ರೀ ಷ.ಬ್ರ. ಓಂಕಾರ ಶಿವಾಚಾರ್ಯ ಸ್ವಾಮೀಜಿಯವರು ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ, ಹಿರಿಯ ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪನವರನ್ನು ಭೇಟಿ ಮಾಡಿ, ಯೋಗಕ್ಷೇಮ ವಿಚಾರಿಸಿದರು. ತಾವು ಶತಾಯುಷಿಗಳಾಗಿ ಶತಮಾನೋತ್ಸವ ಆಚರಿಸಿ ಎಂದು ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್. ಎಸ್. ಮಲ್ಲಿಕಾರ್ಜುನ್, ಜಂಗಮ ಸಮಾಜದ ಮುಖಂಡರಾದ ಸಾಂಬ ಶಿವಯ್ಯ, ವಾಗೀಶ್ ಸ್ವಾಮಿ, ಅಕ್ಕಿ ರಾಜು, ವೀರಮಾಹೇಶ್ವರ ಸೊಸೈಟಿ ಅಧ್ಯಕ್ಷ ತ್ಯಾವಣಿಗಿ ವೀರಭದ್ರ ಸ್ವಾಮಿ, ಪಂಚಾಕ್ಷರಯ್ಯ ಬಸಾಪುರ, ಎಲ್‌ಎಂಆರ್ ಬಸವರಾಜಯ್ಯ, ಪತ್ರೇಶ್, ಆಲೂರ್ ಸಿದ್ದಯ್ಯ, ಪರಮೇಶ್ವರಯ್ಯ ಮತ್ತಿತರರು ಉಪಸ್ಥಿತರಿದ್ದರು.




KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas